ಅಪ್ರತಿಮ ಸುಂದರ ಕರಕುಶಲತೆ
ಪರಿಪೂರ್ಣತೆಯ ಹಂತದ ಸಂತೃಪ್ತಿ
ಗ್ಲೆನಿಶಿಯಾ ಡಿಸೈನರ್ ಡೋರ್ & ಗ್ಲೆಶು ಫರ್ನಿಚರ್
ನಂದಳಿಕೆ, ವಯಾ ಬೆಳ್ಮಣ್, ಕಾರ್ಕಳ ತಾಲೂಕು
ಫೋನ್: 08258-274075, 285060
ಶೋರೂಂ, ನಂದಳಿಕೆ
ಸಹ ಸಂಸ್ಥೆ: ಜೀನಸ್ ವುಡ್ ಇಂಡಸ್ಟ್ರೀಸ್ ಸೊಮಿಲ್, ನಂದಳಿಕೆ
ಪ್ರೊ| ಗ್ರೆಗರಿ ಬಿ. ಮಿನೇಜಸ್(ಎಡ್ವಿ)

ಸಂಪಾದಕರು: ರೇಮಂಡ್ ಡಿ'ಕುನಾ
ಎಂ.ಎ. ಇನ್ ಜರ್ನಲಿಸಂ, ಬಿ.ಎ.,ಎಲ್.ಎಲ್.ಬಿ.
ESTD: 2004 E-mail:pingaara@gmail.com

# 20 ನೇ ವರ್ಷ ಪಿಂಗಾರ

ಮುಂಬೈ, ದ.ಕ., ಉಡುಪಿ, ಕಾಸರಗೋಡು ಜಿಲ್ಲೆಗಳ ಏಕೈಕ ಪತ್ರಿಕೆ
Licensed to post without prepayment Licence No. SK/WPP / MNG / 183/2022-24
Regd. No.: MNG/954/2022-2024

impression
The Copier Solutions
- Multi Colour Copiers,
- Black & White Copiers
- Spiral Binding
- Spares & Toners
- Laser printer Catridges & Refill
Also we provide copiers for Rental
Lawrence - 9741885005, 9164845005
Impression l2016@gmail.com
#3w-3-265, Near Marilyn Apartment,
Opp. AL helen, Bejai, Mangalore - 575 004
Canon Konica Minolta xerox KYOCERA EPSON

● RNI: KARKAN/2009/29901 ● ಸಂಪುಟ:20 ●ಸಂಚಿಕೆ:13–15 ● ಪುಟ:6 ● PINGARA Published & Posted on 29 June 2023 at M'luru Head Post Office ●ಜುಲೈ 05, 2023 ● ಮಂಗಳೂರು, MANGALURU ● ಬೆಲೆ: ರೂ. 3

## ಹೆಬ್ರಿ: ಮಿಶ್ರತಳಿ ಹೆಣ್ಣು ಕರುಗಳ ಸಾಕಾಣಿಕ ಯೋಜನೆ' ಮಾಹಿತಿ ಶಿಬಿರ

ಹೆಬ್ರಿ: ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟದ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಿಂದ ಹಾಲಿನ ಶೇಖರಣೆಯು ಕಡಿಮೆಯಾಗಿದ್ದು, ಗ್ರಾಹಕರ ಬೇಡಿಕೆಯಂತೆ ಹಾಲಿನ ಪೂರೈಕೆಯು ಕಷ್ಟ ಸಾಧ್ಯವಾಗಿದೆ.

2023–24 ನೇ ಸಾಲಿನಲ್ಲಿ ಒಕ್ಕೂಟ ವ್ಯಾಪ್ತಿಯಲ್ಲಿ ಈ ವರ್ಷ ಜೂನ್ 01 ರಿಂದ" ಮಿಶ್ರತಳಿ ಹೆಣ್ಣು ಕರುಗಳ ಸಾಕಾಣಿಕ ಯೋಜನೆ" ಯನ್ನು ಜಾರಿ ತರಲಾಗಿದ್ದು, ಈ ವರ್ಷ 5,000 ಹೆಣ್ಣು ಕರುಗಳಿಗೆ ವಾರ್ಷಿಕ ಸುಮಾರು 1.5 ಕೋಟಿ ರೂಪಾಯಿ ಅನುದಾನದ ಈ ಯೋಜನೆ ಅನುಷ್ಠಾನಗೊಳ್ಳಲಿದೆ.



ಈ ಯೋಜನೆಯಲ್ಲಿ 11 ದಿನದ ಉತ್ತಮ ಮಿಶ್ರತಳಿ ಹೆಣ್ಣು ಕರು ಅಥವಾ ಉತ್ತಮ ಗುಣಮಟ್ಟದ ದೇಶಿ ಹೆಣ್ಣು ಕರುವನ್ನು (ಸಾಹಿ ವಾಲ್–ಗಿರ್) ಸಂಘದ ವ್ಯಾಪ್ತಿಯಲ್ಲಿ ಸಂಘದ ಸಿಬ್ಬಂದಿಯವರು ಗುರುತಿಸಿ, ಅದನ್ನು ಒಕ್ಕೂಟದ ಪಶುವೈದ್ಯಾಧಿಕಾರಿಗಳ ಶಿಫಾರಸಿನಂತೆ ಆಯ್ಕೆ ಮಾಡಲಾಗುವುದು.

ಆಯ್ಕೆಯಾದ ಹೆಣ್ಣು ಕರುಗಳಿಗೆ ನಿಯಮಿತವಾದ ಆರೋಗ್ಯ ತಪಾಸಣೆ, ನಂದಿನಿ ಕರು ಆಹಾರ, ಜಂತುಹುಳದ ಔಷಧ, ಲವಣ ಮಿಶ್ರಣವನ್ನು ಅನುದಾನದ ರೂಪದಲ್ಲಿ ಉಚಿತವಾಗಿ ನೀಡಲಾಗುವುದು ಎಂದು ವಿವರ ನೀಡಿದರು.

5ನೇ ಪುಟದಲ್ಲಿ ಮುಂದುವರಿಯುವುದು

## ತುಲುವೆರೆ ಆರಾದನೆಡ್ ಪೊಸಪ್ಪೆ ಬೊಕ್ಕ ಗದ್ದಿಗೆದ ಬೊಂಬೆ

ಬೆರ್ಮೆರೆ ಸ್ರಿಷ್ಟಿ, ನಾಗ ದೇವೆರೆ ದ್ರಿಷ್ಟಿ, ಸತ್ಯ ಚಿತ್ತೊಲ ಸಾಯೊ, ಪಂಚ ವರ್ಣದ ಮರ್ನ್ಡದ ಮಾಯೊ, ಮುಡಾಯಿ ಗಟ್ಟದ ಪಚ್ಚೆ ಸಾಲ್, ಪಡ್ಡಾಯಿ ಕಡಲಪ್ಪೆನ ನೀರ ತೇರ್, ಬಡಕಾಯಿಡ್ ಮೆರೆಯಿನ ಬಾರ್ಕೂರು, ತೆನ್ಕಾಯಿ ನೀಲೇಶ್ವರದ ಸೂರು ಉಂದುವೇ ನಮ್ಮ ಮೋಕೆದ ಬೂಡು ಪೊರ್ಲ ತುಲುನಾಡ್.



ತುಲುನಾಡ್ ಪನ್ನಗನೇ ನೆಗತ್ತ್ ತೋಜುನು ಅಲ್ಪ ಆಜಂದಿ ಮಾಜಂದಿ ತೋಜಂದಿ ಕುಂದದಿ ಅಲಿಯಂದಿ ಎರ್ಕಂದಿ ಸೊರ್ಕಂದಿ ಸೆಲ್ಟಂದಿ ಪೆಚಂದಿ ನಮ್ಮ ತುಲುವ ಸಂಸ್ಕೃತಿ. ಪ್ರಾಕೃತಿಕವಾದ್ ನಮ್ಮ ತುಲುನಾಡ್ ಯೇತ್ ಪೊಲ್ಲರ್ಂಡ ಆತೆ ಪೊರ್ಲ್ ನಮ್ಮ ಆಚಾರ ವಿಚಾರ, ನೇಮ ನಡಾವಳಿ, ಆರಾಧನೆ ಬೊಕ್ಕ ಜೀವನ ಕ್ರಮ. ಒರಿ ತುಲುವೆ ಪುಟುದು ಮಲ್ಲ ಆದ್ ಕಲ್ತುದು ಬಂಜಿದ ಪಡಿಕಾದ್ ಏಲ್ ಕಡಲಾಯರೆ ದಾಂಟ್ದ್ ಪೋಯೆಡಲಾ, ಅತ್ತಂಡ ಪರತಿರಿದ್ ಪೊಸತಿರಿ ಮುಟ್ಟ ನಮನ್ ಒಂಜೇ ಕುಬಲಡಿಟ್ ಕನತ್ ಕೂಡು ಪಾಡುನು ಅವು ನಮ್ಮ ಪೆರ್ಮೆದ ಬೂತಾರಾದನೆ ಬೊಕ್ಕ ನಾಗಾರಾದನೆ. ಕೂಡು ಕುಟುಂಬ ಪದ್ಧತಿಗ್ ನೆಗತ್ತ್ ತೋಜುನ ಉದಾರ್ಮೆ ನಮ್ಮ ತುಲು ಸಂಸ್ಕೃತಿ.

2ನೇ ಪುಟದಲ್ಲಿ ಮುಂದುವರಿಯುವುದು

## ತುಂಬಿದ ಸಂಸಾರ ಬುಡ ಅಲುಗಾಡಬಾರದಷ್ಟೇ ರುದ್ರಾಕ್ಷಿ; ಉಂಡೆ ಹಲಸು

ನಿತ್ಯ ನೀರು ಗೊಬ್ಬರ ಕೊಡುವ ಸಾಕು ಗಿಡಗಳು ಬಿಸಿಲಿನ ಪ್ರಕರ ತಾಪಕ್ಕೆ ಬಚ್ಚಿ ಬಸವಳಿದು ಇದನ್ನು ಈ ಪ್ರಮಾಣದಲ್ಲಿ ನೋಡಿದ್ದು ನಾವು ಇದೇ ಮೊದಲು ಹಾಗಿದ್ದರೂ ಏನು ಆರೈಕೆ ಇಲ್ಲದೆ ಬೆಳೆಯುವ ಹಲಸು ಬುಡದಿಂದ ತುದಿ ತನಕ ಗೊಂಚಲು ಗೊಂಚಲಾಗಿ ನೇತಾಡಿದ್ದನ್ನು ನೋಡಿದಾಗಂತೂ ಕಣ್ತುಂಬಿ ಬರುತ್ತದೆ.

ಎಸ್ ಯು ಪಾರ್ವತಿ ಶುಂಠಿ ಮನೆ ವಿರಾಜಪೇಟೆ ಕೂರ್ಗ್ ಇವರ ಕಾಫಿ ತೋಟದಲ್ಲಿ ಈ ಹಲಸಿನ ಮರ ವಿದ್ದು ಜನರು ಮೆಚ್ಚಿಕೊಂಡು ಬಾಯಿ ಚಪ್ಪರಿಸಿಕೊಂಡು ಸವಿಯ ಹಣ್ಣು ಎಂದರೆ ಸಾಕು ಎಲ್ಲರ ಬಾಯಲ್ಲೂ ನೀರು ಇರುವುದು ಸಹಜ ಹಲಸಿನ ಹಣ್ಣು ಅಂದ್ರೆ ಯಾರಿಗೆ ತಾನೇ ಇಷ್ಟ ಇಲ್ಲ ಹೇಳಿ ಹಲಸಿನ ಹಣ್ಣಿನಲ್ಲಿಯೂ ಕೂಡ ವಿಭಿನ್ನ ತಳಿಗಳಿವೆ.



ಇದೀಗ ಒಂದುವರೆ ವರ್ಷದಲ್ಲಿ ಹಣ್ಣು ಕೊಡುವ ನಿನ್ನ ತಾಯಿ ಹಲಸಿನ ಗಿಡ ಇದು ಹಲಸಿನ ಹಣ್ಣು ಕೊಡುವ ಮರವಲ್ಲ ಗಿಡ ಹಾಗೆಯೇ ವಿಯೆಟ್ನಾಂ ಹಲಸು, ಚಂದ್ರ ಬಕ್ಕೆ, ಸೊಂಪಾಡಿ ಹಲಸು, ರುದ್ರಾಕ್ಷಿ ಹಲಸು, ಗಮ್ ಲೆಸ್, ಹೀಗೆ ಹಲಸೊಂದು ತಳಿ ನೂರಾರು ಹಣ್ಣು ಒಂದು ಗುಣ ಹಲವು ಇದೀಗ ಕಸಿ ಗಿಡಗಳು ಹಸಿದವನಿಗೆ ಹಲಸು ಉಂಡವನಿಗೆ ಮಾವು" ಎಂಬುದು ನಮ್ಮಲ್ಲಿ ಪ್ರಚಾರದಲ್ಲಿರುವ ಗಾದೆ ಮಾತು ಆದರೆ ಹಲಸಿನ ಮರ ಸಮೃದ್ಧ ಫಲ ನೀಡುವ ಮೂಲಕ ಲಾಭದಾಯಕವಾಗಿದೆ ಹಲಸಿನಹಣ್ಣಿಗೆ ಈಗ ಬಾರಿ ಬೇಡಿಕೆ ಇದೆ ಯಾವುದೇ ಪ್ರದೇಶದಲ್ಲೂ ಹಲಸು ಬೆಳೆಯುತ್ತದೆ. ಇದಕ್ಕೆ ಸ್ವಲ್ಪ ನಿರಾಶಯವಿದ್ದರೂ ಸಾಕು ಹಲಸಿನ ಮರ ಫಲ ಬಿಡುತ್ತದೆ . ಸಸ್ಯಶಾಸ್ತ್ರದಲ್ಲಿ 'ಆರ್ಟೋಕಾರ್ಪಸ್ ಹೈಟ್ರೋ ಫೈಲ್ಸ್' ತಳಿಗೆ ಸೇರಿದೆ ಒಂದು ಬಕ್ಕೆ ಆದರೆ ಇನ್ನೊಂದು ತುಳುವ ಈ ಬಕ್ಕೆ ಹಲಸಿನ ಹಣ್ಣು ಗಟ್ಟಿಯಾದ ಸಿಪ್ಪೆಯನ್ನು ಹೊಂದಿದ್ದು ತುಳುವ ಹಣ್ಣು ಮೆತ್ತ ಮೆತ್ತಗೆ ಹಣ್ಣು ಒಂದು ರೀತಿಯಲ್ಲಿ ನರಸಿಂಹನು ಹಿರಣ್ಯ ಕಶುಪಿವಿನ ಹೊಟ್ಟೆಯನ್ನು ಬಗೆದಂತೆ ತುಳುವ ಹಲಸಿನ ಹಣ್ಣನ್ನು ಬರಿಯ ಕೈಯಿಂದಲೇ ಬಿಡಿಸಬಹುದು ನಾಲಿಗೆ ಎಂಬುದು ತುಂಬಾ ಅಪಾಯಕಾರಿ ವಿವಿಧ ಬಗೆ ಬಗೆಯ ಸವಿ ಸವಿದು ಹಲಸಿನ ಹಣ್ಣು ಕಾಯಿ ಅದರ ರುಚಿಯ ಬಗ್ಗೆ ಕೇಳಿದರೆ ಎಲ್ಲಾ ವಾವ್ ಎನ್ನುವವರೇ ಹೆಚ್ಚು ಹಲಸಿನ ಹಣ್ಣಿನ ರುಚಿಯನ್ನು ಯಾರು ಬೇಗ ಮರೆಯಲು ಸಾಧ್ಯವಿಲ್ಲ ಹಾಗೆ ಕೈಯಲ್ಲಿ ಸುವಾಸನೆಯ ಜೊತೆ ಅಂಟು ನಂಟು ತುಂಬಿ ಬಂದು ಹಾಲು ಜೇನ ಹಾಗೆ ಹಲಸಿನ ಹಣ್ಣಿನ ದೋಸೆಗೆ ತುಪ್ಪದ ಕಾಂಬಿನೇಷನ್ ಎಂತವರಿಗೂ ಬಾಯಲ್ಲಿ ನೀರು ಉರಿಸುತ್ತದೆ.

4ನೇ ಪುಟದಲ್ಲಿ ಮುಂದುವರಿಯುವುದು



ಸಂಪಾದಕೀಯ

# ಒಳಗುಟ್ಟು ತಿರುಳು



ರೇಮಂಡ್ ಡಿಕುನಾ ತಾಕೊಡೆ

ನಾವು ನಮ್ಮ ಜೊತೆಗೆ ಇರುವ ಎಲ್ಲಾ ಸವಲತ್ತುಗಳ ಮೇಲೆ ನಮ್ಮ ಹಕ್ಕನ್ನು ಸ್ಥಾಪಿಸಿಕೊಂಡು ವರ್ಷಾನುಗಟ್ಟಲೆ ಅನುಭವ ಮಾಡುವ ಹಾಗೆ ಜಮಾಯಿಸಿ ಬಿಡುತ್ತವೆ.

ಒಂದು ವಾಹನ ಖರೀದಿಸಿ ಮನೆಗೆ ತಂದರೆ ಅದನ್ನು ತಮ್ಮ ಕುಟುಂಬದ ಸದಸ್ಯ ಎಂದು ಪೇಸ್ ಭುಕ್ ಸ್ಟೇಟಸ್ ಹಾಕಿ ಸಂಭ್ರಮದಿಂದ ಇದ್ದವರು ನೋಡಿದ್ದೇವೆ.

ಒಳ್ಳೆಯ ಸೀರೆ, ಅಂಗಿ ಹೀಗೆ ಈ ಲೋಕದ ಎಲ್ಲಾ ಸವಲತ್ತುಗಳನ್ನು ಅನುಭವ ಮಾಡಲು ನಾ ಮುಂದು ಎಂದು ಮೇಲಾಟವನ್ನು ನಡೆಯುವುದು ನೋಡಿದ್ದೇವೆ.

ಇಂದು ಇದ್ದು ನಾಳೆ ಸಾಯುವ ದೇಹದಲ್ಲಿ ನಾವು ಚಿರಂಜೀವಿ ಎನ್ನುವ ಮಟ್ಟಿಗೆ ಎದೆಯುಬ್ಬಿಸಿ ನಡೆದು ಕಾಲಿನಡಿಗೆ ಹುಳುಗಳ ತರಹ ಹೊಸಕಿ ಹಾಕಲು ನಡೆದಂತೆ ಕಾಣಿಸುತ್ತೇವೆ.

ಒಂದು ವಿಷಯ ಖಂಡಿತ, ಎಲ್ಲಾ ವಿಷಯಗಳ ಬಗ್ಗೆ ಗೌಣವಾಗಿ ಇದ್ದು ಇಲ್ಲದಂತೆ ಇರಲು ಸಾಧ್ಯವಿದೆ. ಆದರೆ ಆಸೆಗಳನ್ನು ನಿಯಂತ್ರಣ ಮಾಡಬೇಕು.

ಆಸೆ ಬಿಡುವುದು ಜೀವನದ ಮೇಲಿನ ಉತ್ಸಾಹ ಕಳೆದುಕೊಂಡು ಜೀವನ ಮಾಡಿದಂತೆ.

ಆಲದ ಮರದ ಬಗ್ಗೆ ಬಹಳ ಸೊಗಸಾದ ಮಾತಿದೆ.

ತನ್ನ ಬುಡದಲ್ಲಿ ಹಳೆಯದಾಗಿ ಕುಂಬಾಗಿ ಸಾಯುವ ಮೊದಲು ಗೆಲ್ಲುಗಳಿಗೆ ಬಿಳಲು ಇಳಿಸಿ ನೆಲದೊಳಗೆ ಭದ್ರತೆ ಮಾಡಿಕೊಳ್ಳುತ್ತದೆ.

ಮೂಲ ಕೆಲವು ನಂಬಿಕೆ ಆಚಾರ ವಿಚಾರಗಳು ಅಪ್ಡೇಟ್ ಮಾಡುವ ಸಮಯ ಬಂದಾಗ ಮಾಡಿಕೊಂಡು ಸುಧಾರಣಾ ಕ್ರಮಗಳ ಸಮೇತ ಜೀವಿಸುವ ಸುಖವನ್ನು ಅನುಭವ ಮಾಡಬೇಕು.

ಹಿರಿಯ ನಾಗರಿಕರ ಜೊತೆಯಲ್ಲಿ ಒಮ್ಮೆ ವೈದ್ಯರು ತಪ್ಪಾಗಿ ಹೇಳಿದಂತೆ ನನಗೆ ಭಾಸವಾಗಿದ್ದಿದೆ. ವೈದ್ಯರು ಪರೀಕ್ಷೆಯ ನಂತರ "ಏಜ್ ಆಗಿದೆ ಮಾತ್ರೆ ಕೊಡುವೆ" ಎಂದರು.

ನಾನು ಹೇಳಿದೆ, ಏಜ್ ಆಗಿದೆ ಎಂದು ನಮಗೂ ತಿಳಿದಿದೆ. ನೀವು ನಿಮ್ಮ ಪ್ರಾಯಕ್ಕೆ ಪರವಾಗಿಲ್ಲ. ಮಾತ್ರೆಗಳನ್ನು ಕೊಡುವೆ, ಎಂದು ಹೇಳಿದರೆ ಒಳಿತು ಎಂದೆ.

ನಮ್ಮ ಮನಸ್ಸು ಸೂಕ್ಷ್ಮವಾಗಿ ಸ್ಪಂಧನ ಮಾಡುತ್ತದೆ.

ವೈದ್ಯಕೀಯ ಚಿಕಿತ್ಸೆ ಅರ್ಧದಷ್ಟು ಫಲಕಾರಿಯಾಗುವುದು ಮಾತಿನಲ್ಲಿ ವಿಶ್ವಾಸಾರ್ಹತೆಯನ್ನು ನೋಡಿ.

ನಾವು ಈ ದೇಹದಲ್ಲಿ ಜೀವನ ಮಾಡುವ ಜೀವ. ರಕ್ತ ಮಾಂಸ ಎಲುಬುಗಳ ಜೊತೆಯಲ್ಲಿ ಜೀವ.

ಹೃದಯಕ್ಕೆ, ಲಿವರಿಗೆ, ಕಿಡ್ನಿಗೆ, ಮೆದುಳಿಗೆ, ರಕ್ತಕ್ಕೆ, ಎಲುಬಿಗೆ ಹೀಗೆ ದೇಹದ ಎಲ್ಲಾ ಭಾಗಗಳಿಗೆ ಮದ್ದು ಇದೆ. ಜೀವಕ್ಕೆ ಇಲ್ಲ.

ಜೀವಕ್ಕೆ ನಾವು ಆಶಯವನ್ನು ಕೊಡಬಹುದು. ಬದುಕಲು ಹೋಪ್ ಕೊಡಬಹುದು.

ತಾನು ಬದುಕಿದರೆ ನನ್ನ ಕುಟುಂಬದ ಜನರು ಖುಷಿ ಪಡುತ್ತಾರೆ ಎಂದು ಹೇಳಬಹುದು.

ಬದಲಿಗೆ ಭಾರವಾಗಿದ್ದೇವೆ ಆತ್ಮೀಯ ಜನರಿಗೆ ಎಂದು ಕಲ್ಪನೆ ಬಂದರೆ ಅಥವಾ ಹಾಗೆ ಅನಿಸುವಂತೆ ಮಾಡಿದರೆ ಯಾವುದೇ ಚಿಕಿತ್ಸೆ ಫಲಕಾರಿ ಆಗುವುದಿಲ್ಲ.

ನಮ್ಮ ಈ ಸಣ್ಣ ಅವಧಿಯ ಜೀವನದ ದಿನಗಳಲ್ಲಿ ಬಿಟ್ಟು ಹೋದ ಏನೂ ನಮಗೆ ಉಪಯೋಗ ಆಘುವುದಿಲ್ಲ. ಬೇರೆ ಸ್ಪರ್ಧಿಗಳು ತಮ್ಮ ಖಾತೆಗೆ ಮಾಡಿ ಬಿಡುತ್ತಾರೆ.

ಜೀವ ಇರುವಾಗಲೇ ಬೇಕಾದ ಜನಾನುರಾಗಿತನ ಬರದೆ ಹೋದರೆ ಮರಣದ ನಂತರ ಕೊಡುವ ಪರಿಚಯ ಭಾಷಣವು ಮಾತನಾಡುವವನ ಪಾಂಡಿತ್ಯವನ್ನು ಮೆರೆಸೀತು. ಅಷ್ಟೇ ಪಿ

# ತುಲುವೆರೆ ಆರಾದನೆಡ್ ಪೊಸಪ್ಪೆ ಬೊಕ್ಕ ಗದ್ದಿಗೆದ ಬೊಂಬೆ

1ನೇ ಪುಟದಿಂದ

ಪ್ರತಿ ತುಲುವಗ್ ಆದಿ ಆಲಡೆ, ಕುಟುಮದ ಇಲ್ಲ್ ಪನ್ಪುನ ಉಪ್ಪುಂಡು. ಕುಟುಮದ ಇಲ್ಲಡ್



ವರ್ಸೊಚ್ಚಯ ನಡಪುನಗ, ಬೂತೊಗು ಕೋಲ ಆನಗ, ಪುಂಡಿ ಪನವು ಕಟ್ಟ್‌ನಗ, ನಾಗಗ್ ಪೇರ್ ಮಲ್ಪುನಗ ಆ ಕುಟುಮಗ್ ಸೇರ್ದಿನಕುಲು ಓಲು ಇತ್ತೆರ್ಡಲಾ ಆನಿ ಬತ್ತುದು ಅಲ್ಪ ಸೇರ್ವೆರ್. ಇಂಚ ಎನ್ನ ಕಂಡನಿನ ಕುಟುಮದ ಇಲ್ಲಡ್ ಇಂಚಪ್ಪೊಗು ನಡತಿನ ಕೋಲದಾನಿ ಯಾನ್ ತೂಯಿನ ವಿಶೇಷನ್ ಮಾತೆರೆನೊಟ್ಟುಗು ಪಟ್ಟೊಂನರೆ ಬಯಕುವೆ, ಈ ಬರವುಡ್ ಕೆಲವು ಮಾಹಿತಿ ಯಾನ್ ತೆರಿಯೊಂದಿನ ಬೊಕ್ಕ ಕೆಲವು ಮಾಹಿತಿನ್ ದೈವ ನರ್ತಕೆರಾಯಿನ ಕಿಶೋರಣ್ಣೆ ಕೊರ್ತಿನ.



ತುಲುವೆರೆಗ್ ಅಪ್ಪೆ ಅಮ್ಮೆ ತಮ್ಮಲೆಯಾದ್ ಪೋಯಿನಲ್ಪ ಬತ್ತಿನಲ್ಪ ಅರ್ಕ್ದ್ ತರ್ಕ್ದ್ ಕಾಪುನ ಸತ್ಯ ಅವ್ ಪಂಜುರ್ಲಿ. ಎಚ್ಚಿನ ತುಲುವೆರೆಗ್ ಪ್ರಧಾನ ದೈವ ಪಂಡ ಪಂಜುರ್ಲಿ. ಆಂಡ ಮಾಯೊದ ಮಟ್ಟೆಲ್ಡ್, ಸೇರಂಗ್‌ದ ಬೆಪ್ಪುಡು ಸಿರಿ ಮಿರೆ ಕೊರ್ದು ಮಾನಾವುನ ಅಪ್ಪೆಯೇರ್ ಕೇಂಡ ಅವು ಪೊಸಪ್ಪೆ ಅತ್ತ್ಂಡ ಸತ್ಯದೇವತೆ. ಪೊಸಪ್ಪೆನ್ ದೇವಿ ರೂಪೊಡು ಆರಾದನೆ ಮಲ್ಪುನಕುಲು ನಮ ಆಂಡ ಆಲೆ ಗುಡಿ ಪತ್ಂಡ ಸತ್ಯದೇವತೆ, ಇಲ್ಲ್ ಪತ್ಂಡ ಅಮ್ನೂರು, ಸತ್ಯೊಗು ಸತ್ಯದೇವೆತೆ, ದರ್ಮೊಗು ದರ್ಮದೇವತೆ, ಮಾಯೊಗು ಮಂತ್ರದೇವತೆ, ಕಪಟಗ್ ಕಲ್ಲುರ್ಟಿ, ಎಲ್ಲಮ್ಮ, ದುರ್ಗಮ್ಮ, ಕಾಲಮ್ಮ, ಮಾರಮ್ಮ , ಮಮ್ಮಾಯಿ ಪನ್ಪಿನ ರೂಪೊಡು ಏಲ್ ಗುಡಿ ಮಮ್ಮಾಯಿನ ಗದ್ದಿಗೆನ್ ಏರೊಂದು ಬತ್ತಿಂಚಿತ್ತಿನ ಸತ್ಯ. ಪುರಲ್ದ ಊರುಡು ಅಪ್ಪೆ ರಾಜರಾಜೇಶ್ವರಿನ ಬಲತ ಮಾರ್ಗಿಲ್ಡ್ ಚಂಡ ಮುಂಡೆರೆನ ರುಂಡೊನು ಕಡ್ತುದು ಪಾರಾದ್ ಒಂಜಿ ತಿಂಗೊಲು ಬಾಕಿಮಾರ್ ಕಂಡೊಡು ಚೆಂಡಾಟ ಗೊಬ್ಬಿನ ರುದ್ರ ಬಯಂಕರಿ ಬದ್ರಕಾಲಿ ಯಾದ್ ಮೆರೆಪಿನ ಸಕ್ತಿಯೇ ಸತ್ಯದೇವತೆ ಪಂದ್ಲಾ ಪನ್ಪೆರ್. ತುಲುವೆರೆ ಸತ್ಯದೇವತೆನ್ ಬದ್ರಕಾಲಿ ಅತ್ತಂದೆ ಅರ್ಧನಾರೀಶ್ವರ ರೂಪೊಡ್ಲಾ ಆರಾದನೆ ಮಲ್ಪುವೆರ್.

ನಮ ಇಲ್ಲದ ಚಾವಡಿದ ಮನೆ ಮಂಚಾವುಡು ಶಾಂತಮೂರ್ತಿಯಾದ್ ಸಾತ್ವಿಕ ಆರಾದನೆಡ್ ಮೆನ್ಪುನ ದೇವತಾರೂಪೊಡು ಸತ್ಯದೇವತೆನ್ ತೂಪ. ದೈವದ ಕಲಟ್ ಮುಖವರ್ಣಿಕೆಡ್ (ಅರದಾಲ) ಕಪ್ಪು ರಂಗ್ ಪ್ರದಾನವಾದ್ ಮೋನೆಡ್ ಅಲ್ಪಲ್ಪ ಬೊಲ್ದು ಬೊಟ್ಟ್ , ಕಣ್ಣ್‌ದ ಸುತ್ತ ಕೋಪನ್ ತೋಜಾವುನ ಕೆಂಪು ರಂಗ್ ಬೊಕ್ಕ ಉಗ್ರ ನಲಿಕೆ ಮುಲ್ಪ ನಮಕ್ ಬದ್ರಕಾಲಿನ ಒರುಟು ತೋಜಿಯೆರ್ಡ ಸೊಂಟದ ಮಿತ್ತ್ ಬಜಿ ಮೆಯ್, ಬಂಜಿಡ್ ಬೆರಿಟ್ ದಪ್ಪದ ಅಡ್ಡನಾಮ ಸೊಂಟೊರ್ದು ತಿರ್ತ್ ಪೊನ್ನ ದುತ್ತೈತ ಮುಲ್ಪ ನಮಕ್ ಅರ್ಧನಾರೀಶ್ವರ ರೂಪೊ ಗೇನಗ್ ಬಪುರ್ಂಡು. ಇಂಚ ನಮ ಮೂಜಿ ರೂಪೊಡ್ಲಾ ಪೊಸಪ್ಪೆನ್ ತೂಪ.

6ನೇ ಪುಟದಲ್ಲಿ ಮುಂದುವರಿಯುವುದು

## ಪಟ್ಟದರಸಿಗೆ
## (ಶೃಂಗಾರ ಕವಿತೆ)

ಭಾಗ್ಯಾದಾ ಲಕ್ಷ್ಮೀ ಬಾರಮ್ಮ ನೀನು
ಗುಡಿಯೊಗಿರುವವನ ಸಾಕ್ಷೀಯ ನಿನ್ನವನು,
ಹಣೆಯಲಿಡಲು ಕುಂಕುಮವನು
ಶೋಭೆಯ ಮಾಂಗಲ್ಯದ ಧಾರಣೆಯನು.

ನೂರೂರು ಸುತ್ತಿದೊಡೆ ಸಾಕೆ
ಗುರು ಹಿರಿಯರು ಆಶೀರ್ವಾದ ಇರಕೆ
ಸೌಜನ್ಯದ ಮಗಳನು ಹೆತ್ತವರ ಮನಕೆ
ಸುಖವಾಗುವುದು ಶುಭ ಆ ಗಳಿಗೆ.

ಅರಸಿ ನೀನು ಹೃದಯದ ಪಟ್ಟದಲಿ
ಚಿಮ್ಮುತಾ ನೆರಿಗೆಗಳನು ನಡೆಯಲಿ
ಕಾಲ್ಗೆಜ್ಜೆಗಳು ಕೋಮಲ ಕಾಲುಗಳಲಿ
ಉಲಿದುವು ನಾಟ್ಯದಾ ಗೆಜ್ಜೆಗೆಳಲಿ.

ಮನೆಯೆನದು ಈಗ ಸಂಭ್ರಮ
ಕೂಡು ಕುಟುಂಬದ ಸಂಗಮ,
ನೀನೇ ತಂದಿಹದು ಆಗಮ
ಅರಮನೆಯಿದು ನೀನು ಪಟ್ರಮ.



ರೇಮಂಡ್ ಡಿಕೂನಾ ತಾಕೊಡೆ

ESTD: 2004 ಪಿಂಗಾರ ಪಿಂಗಾರ
20ನೇ ವರುಷಕ್ಕೆ ದಾಪುಗಾಲು

## ಮೆದುಳಿಗೊಂದು ಟಾನಿಕ್



* ಓಂಟರ್ಕ (ವಾಂಟರ್ಕ) ಶಬ್ದವು ಮೂಲ ದ್ರಾವಿಡ ಓಡ್, ಓಟ್ ನುಡಿಯಿಂದ ಬಂದಿದೆ.

* ಓಡ್, ಓಟ್ ಎಂದರೆ ಚಿಪ್ಪು. ಓಂಟರ್ಕ ಚಿಪ್ಪು ಹೊಂದಿದೆ.

* ಓಟೆ, ವಾಟೆ ಎಂಬ ನುಡಿ ಕೂಡ ಚಿಪ್ಪುಇರುವ ಕಾರಣಕ್ಕೆ ಬಂದಿದೆ.

* ಓಡು ಸುಡುವ ಓಡಾರಿ ಹಿಂದೆ ಇದ್ದರು.

* ಹಿಂದೆ ಮನೆಗಳಿಗೆ ಅಂತಾ ಓಡು ಸೂರು ಇದ್ದವು.

* ಜರ್ಮನಿ ಮಿಶನರಿಗಳು ಅದನ್ನು ಅಗಲ ಮಾಡಿದರು. ಅದು ಬಿಸಿಲಿಗೆ ಕಾದಿತು. ಹೆಂಚು ಎಂಬ ಹೆಸರು ಪಡೆಯಿತು.

## ತೆರೆಗೆ ಬರಲು ಸಜ್ಜಾಗಿದೆ ರಾಜ್ ಬಿ.ಶೆಟ್ಟಿ ಅಭಿನಯದ 'ಟೋಬಿ' ಸಿನಿಮಾ

ನಟ ರಾಜ್ ಬಿ ಶೆಟ್ಟಿ ಅವರ ಸಿನಿಮಾ ಅಂದರೆನೆ ವಿಶೇಷ. ಇದೀಗ ಅವರು ಹೊಸ ಸಿನಿಮಾ ಅನೌನ್ಸ್ ಮಾಡಿದ್ದಾರೆ. ಸಿನಿಮಾದ ಹೆಸರು ಮೂಲಕವೇ ಸಿನಿಮಾ ಹೇಗಿರಲಿದೆ ಎನ್ನುವ ಕಾತರ ಹೆಚ್ಚಿದ್ದಾರೆ.




ಮಾರಿ.. ಮಾರಿ.. ಮಾರಿಗೆ ದಾರಿ! 'ಟೋಬಿ' ಆಗಸ್ಟ್ 25ರಂದು ನಿಮ್ಮ ಮುಂದೆ ಎಂಬ ಸುದ್ದಿಯನ್ನು ರಾಜ್ ಬಿ ಶೆಟ್ಟಿ ಅವರು ಅಭಿಮಾನಿಗಳಲ್ಲಿ ಹಂಚಿಕೊಂಡಿದ್ದಾರೆ.

ಇನ್ನು 'ಒಂದು ಮೊಟ್ಟೆಯ ಕಥೆ', 'ಗರುಡ ಗಮನ ವೃಷಭ ವಾಹನ' ಸಿನಿಮಾಗಳನ್ನು ನಿರ್ದೇಶನ ಮಾಡಿರುವ ರಾಜ್ ಬಿ. ಶೆಟ್ಟಿ ಇದೀಗ ಟೋಬಿ ಮೂಲಕ ಮತ್ತೊಂದು ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ.

ಟೋಬಿ ಸಿನಿಮಾದಲ್ಲಿ ಸಂಯುಕ್ತಾ ಹೊರನಾಡು, ಚೈತ್ರಾ ಆಚಾರ್ ಸೇರಿದಂತೆ ಕಲಾವಿದರ ದಂಡೂ ಇದ್ದು, ಪ್ರವೀಣ್ ಶ್ರೀಯಾನ್ ಛಾಯಾಗ್ರಹಣ, ಮಿಥುನ್ ಮುಕುಂದನ್ ಸಂಗೀತ ನೀಡಿದ್ದಾರೆ.

## ಅರಿಯಾನಾ ಗ್ರಾಂಡೆ 30ನೇ ಹುಟ್ಟುಹಬ್ಬದಂದು ಕಿರಿಯ ವ್ಯಕ್ತಿಗೆ ಟಿಪ್ಪಣಿ ಬರೆಯುತ್ತಾರೆ


ಪಾಪ್‌ಸ್ಟಾರ್ ಮತ್ತು ಗಾಯಕಿ ಅರಿಯಾನಾ ಗ್ರಾಂಡೆ ಸೋಮವಾರ ತನ್ನ 30ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡರು ಮತ್ತು ಚಿಕ್ಕ ಹುಡುಗಿಗಾಗಿ ವಿಶೇಷ ಟಿಪ್ಪಣಿಯೊಂದಿಗೆ ತನ್ನ ಇನ್‌ಸ್ಟಾಗ್ರಾಮ್‌ನಲ್ಲಿ ತನ್ನ ಬಾಲ್ಯದ ಸೂಪರ್ ಮುದ್ದಾದ ಚಿತ್ರವನ್ನು ಹಂಚಿಕೊಂಡಿದ್ದಾರೆ. ಚಿತ್ರವು ಅವಳು ಹೆಡ್‌ಬ್ಯಾಂಡ್ ಮತ್ತು ಚೆಕರ್ಡ್ ನೀಲಿ ಮತ್ತು ಬಿಳಿ ಉಡುಪನ್ನು ಧರಿಸಿರುವುದನ್ನು ತೋರಿಸಿದೆ.



ಅವಳು ಕ್ರಿಸ್‌ಮಸ್ ಟ್ರೀಯ ಮುಂದೆ ಮುದ್ದಾಗಿ ನಗುತ್ತಿರುವಾಗ ದಿ ವಿಝಾರ್ಡ್ ಆಫ್ ಓಜ್‌ನ ಡೊರೊಥಿಯಿಂದ ಸ್ಫೂರ್ತಿ ಪಡೆದಿದ್ದಾಳೆ. "hbd, ಚಿಕ್ಕದು! ನಾನು ನಿನ್ನನ್ನು ಸೂಕ್ಷ್ಮವಾಗಿ ನಂಬುತ್ತೇನೆ ಮತ್ತು ನಿನ್ನ ಬಗ್ಗೆ ಎಂದಿಗೂ ಹೆಮ್ಮೆಪಡಲಿಲ್ಲ," ಎಂದು ಅವಳು ತನ್ನ ಮಗುವಿನ ನಗು ಮತ್ತು ಸಂತೋಷದ ಚಿತ್ರಣವನ್ನು ಬರೆದಿದ್ದಾಳೆ.

## ಪ್ರಸಿದ್ಧ ಯೂಟ್ಯೂಬರ್ ಕುಶಾ ಕಪಿಲಾ ವಿಚ್ಛೇದನವನ್ನು ಘೋಷಿಸಿದ್ದಾರೆ

ಖ್ಯಾತ ಯೂಟ್ಯೂಬರ್ ಕುಶಾ ಕಪಿಲಾ ಅವರು ತಮ್ಮ ಜನಪ್ರಿಯತೆ ಮತ್ತು ಡಿಜಿಟಲ್ ಜಗತಿನಲಿ ತಮ ವಿಷಯದ ಮೂಲಕ ಜನರನ್ನು



ನಗುತ್ತಿದ್ದಾರೆ. ಮದುವೆಯಾದ 6 ವರ್ಷಗಳ ನಂತರ ಅವರು ವಿಚ್ಛೇದನ ಪಡೆದರು, ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಪೋಸ್ಟ್ ಅನ್ನು ಕುಶಾ ಅವರು ತಮ್ಮ ಪತಿ ಜೋರಾವರ್ ಸಿಂಗ್ ಅಹ್ಲುವಾಲಿಯಾ ಅವರಿಂದ ಬೇರ್ಪಟ್ಟಿದ್ದಾರೆ ಎಂದು ಹೇಳುವ ಸುದೀರ್ಘ ನಾಲ್ಕನೇ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ.

ಅವರು ತಮ್ಮ ಇನ್‌ಸ್ಟಾಗ್ರಾಮ್ ಮುಖಾಂತರ "ಜೋರಾವರ್ ಮತ್ತು ನಾನು ಸೌಹಾರ್ದಯುತವಾಗಿ ಬೇರೆಯಾಗಲು ನಿರ್ಧರಿಸಿದ್ದೇನೆ. ಇದು ಸುಲಭದ ನಿರ್ಧಾರವಲ್ಲ, ಆದರೆ ನಮ್ಮ ಜೀವನದಲ್ಲಿ ಈ ಹಂತದಲ್ಲಿ ಇದು ಸರಿಯಾದ ನಿರ್ಧಾರ ಎಂದು ನಮಗೆ ತಿಳಿದಿದೆ. ನಾವು ಒಟ್ಟಿಗೆ ಹಂಚಿಕೊಂಡಿರುವ ಪ್ರೀತಿ ಮತ್ತು ಜೀವನವು ನಮ್ಮೆಲ್ಲರನ್ನೂ ಮಾಡಿದೆ, ಆದರೆ ದುಃಖಕರವೆಂದರೆ, ನಾವು ಪ್ರಸ್ತುತ ನಮಗಾಗಿ ಬಯಸಿದ್ದಕ್ಕೆ ಹೊಂದಿಕೆಯಾಗುವುದಿಲ್ಲ."

ಮುಂದೆ ಕುಶಾ ಬರೆದರು, "ಸಂಬಂಧದ ನಷ್ಟವು ತುಂಬಾ ನೋವಿನಿಂದ ಕೂಡಿದೆ. ಇದು ನಮಗೆ ಮತ್ತು ನಮ್ಮ ಕುಟುಂಬಗಳಿಗೆ ಕಠಿಣ ಪರೀಕ್ಷೆಯಾಗಿದೆ. ಅದೃಷ್ಟವಶಾತ್, ನಾವು ಅದನ್ನು ಪ್ರಕ್ರಿಯೆಗೊಳಿಸಲು ಸ್ವಲ್ಪ ಸಮಯವನ್ನು ಹೊಂದಿದ್ದೇವೆ, ಆದರೆ ನಾವು ಹಂಚಿಕೊಂಡದ್ದು ಮತ್ತು ಒಟ್ಟಿಗೆ ನಿರ್ಮಿಸಿರುವುದು ಒಂದು ದಶಕದಿಂದ ಅಂಟಿಕೊಂಡಿದೆ. ನಮ್ಮ ಜೀವನದ ಮುಂದಿನ ಹಂತವನ್ನು ತಲುಪಲು ನಮಗೆ ಇನ್ನೂ ಹೆಚ್ಚಿನ ಸಮಯಬೇಕು.

## ಪ್ಲೀಸ್ ನಟನೆಗೆ ಬೈ ಬೈ ಹೇಳ್ಬೇಡಿ, ಸೀರೆಯಲ್ಲಿ ಫೋಟೋ ಶೇರ್ ಮಾಡಿದ ಕಾಜಲ್‌ಗೆ ನೆಟ್ಟಿಗರ ರಿಕ್ವೆಸ್ಟ್



ಕಾಜಲ್ ಹುಟ್ಟುಹಬ್ಬದ ಸಂದರ್ಭದಲ್ಲಿ ಕಾಜಲ್ ಅವರ 60ನೇ ಚಿತ್ರದ ಶೀರ್ಷಿಕೆ ಮತ್ತು ಟೀಸರ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಅದನ್ನೇ ತಿಳಿಸುವ ಕುತೂಹಲಕಾರಿ ಪೋಸ್ಟರ್ ಬಿಡುಗಡೆಯಾಗಿದೆ.

ಕಾಜಲ್ ಒಪ್ಪಿಕೊಂಡ ಸಿನಿಮಾಗಳನ್ನು ಮಾಡಿ ನಟನೆಗೆ ಬೈ ಬೈ ಹೇಳುತ್ತಾರೆ ಎನ್ನಲಾಗಿತ್ತು. ಈ ಸುದ್ದಿ ಅವರ ಅಭಿಮಾನಿಗಳಿಗೆ ಬೇಸರ ತಂದಿತ್ತು. ನಟಿ ಹೊಸ ಫೋಟೋ ಶೇರ್ ಮಾಡಿದ್ದನ್ನು ನೋಡಿ ನೆಟ್ಟಿಗರು ಪ್ಲೀಸ್ ನಟನೆ ನಿಲ್ಲಿಸಬೇಡಿ ಎಂದಿದ್ದಾರೆ.

'ಲಕ್ಷ್ಮೀ ಕಲ್ಯಾಣಂ' ಸಿನಿಮಾದ ಮೂಲಕ ಜನ ಮನ್ನಣೆ ಗಳಿಸಿದ ಈ ನಟಿ ತೆಲುಗು, ಹಿಂದಿ, ತಮಿಳು ಸಿನಿಮಾಗಳಲ್ಲಿ ಹೆಸರು ಮಾಡಿದ್ದಾರೆ. ಸದ್ಯ ಕಾಜಲ್ ಇಂಡಿಯನ್ 2 ಚಿತ್ರದಲ್ಲಿ ನಟಿಸುತ್ತಿದ್ದಾರೆ. ಸ್ಟಾರ್ ಡೈರೆಕ್ಟರ್ ಶಂಕರ್ ಷಣ್ಮುಖಂ ನಿರ್ದೇಶನದ ಈ ಚಿತ್ರದ ಮೇಲೆ ಕಾಜಲ್ ಅಗರ್ವಾಲ್ ಭಾರೀ ನಿರೀಕ್ಷೆ ಇಟ್ಟುಕೊಂ ಡಿದ್ದಾರೆ.

ಸದ್ಯ ಈ ಸಿನಿಮಾದ ಶೂಟಿಂಗ್ ನಡೆಯುತ್ತಿದೆ. ಈ ಸಿನಿಮಾ ಮುಂದಿನ ಸಂಕ್ರಾಂತಿಗೆ ಬಿಡುಗಡೆ ಯಾಗಲಿದೆಯಂತೆ. ಇದಲ್ಲದೇ ಆಚಾರ್ಯ ಚಿತ್ರದ ನಂತರ ತೆಲುಗಿನ ಬಾಲಯ್ಯ ಚಿತ್ರದಲ್ಲಿ ಕಾಜಲ್ ನಟಿಸುತ್ತಿದ್ದಾರೆ. ಬಾಲಯ್ಯ 108 ಸಿನಿಮಾ ವಿಚಾರಕ್ಕೆ ಬಂದರೆ ತೆಲಂಗಾಣ ಹಿನ್ನಲೆಯಲ್ಲಿ ಬರುತ್ತಿರುವ ಈ ಸಿನಿಮಾದಲ್ಲಿ ಬಾಲಯ್ಯ ಡಬಲ್ ರೋಲ್ ಮಾಡಿದ್ದಾರೆ.

Visit Our Webiste: www.pingara.com

## ಯಶವಂತಪುರ – ವಾಸ್ಕೋ ರೇಲು ಮಂಗಳೂರು ಸೆಂಟ್ರಲ್‌ಗೆ ವಿಸ್ತರಿಸಿ

ಬೆಂಗಳೂರು ವಲಯದಲ್ಲಿ ರೈಲು ಚಾಲಕರಿಲ್ಲ; ರೇಲು ರೇಕಿನ ಪ್ರಾಥಮಿಕ ಮೆಂಟೇನೆನ್ಸ್‌ಗೆ ಯಶವಂತಪುರದಲ್ಲಿ ಪಿಟ್ ಲೈನ್ ಖಾಲಿ ಇಲ್ಲ –ಎಂಬ ನೆಪ ಹೇಳಿ, ಉತ್ತಮ ಜನ ಸ್ಪಂದನೆ ಇದ್ದು; ಅತ್ಯಧಿಕ ಆದಾಯ ತರುವ 'ಮುರುಡೇಶ್ವರ ಯಶವಂತಪುರ' ವಾರದ ವಿಶೇಷ ರೈಲನ್ನು ಇನ್ನು ಮುಂದೆ ಓಡಿಸದಿರಲು ನಿಶ್ಚಯಿಸಲಾಗಿದೆ. ಅದನ್ನು 2022 ದೀಪಾವಳಿಯಂದು ಆರಂಭಿಸಲಾಗಿದ್ದು ಶನಿವಾರ 24 ಜೂನ್ 2023 ರಂದು ತನ್ನ ಕಟ್ಟ ಕಡೆಯ ಓಡಾಟವನ್ನು ಮುರುಡೇಶ್ವರದಿಂದ ಆರಂಭಿಸಿದೆ.

ಯಶವಂತಪುರ ಮುರುಡೇಶ್ವರ ರೈಲಿನ ಓಡಾಟವನ್ನು ನಿಲ್ಲಿಸಲು ಈ ಮೇಲೆ ಹೇಳಿದ ವಿಷಯವು ನೈಜ ಕಾರಣ ವಲ್ಲ ಎಂದು ತಿಳಿದು ಬಂದಿದೆ. ರಾತ್ರಿಯ ವೇಳೆಯಲ್ಲಿ, ಸುಬ್ರಹ್ಮಣ್ಯ ಸಕಲೇಶಪುರ ಘಾಟ್ ಸೆಕ್ಷನ್‌ನಲ್ಲಿ ಇತರ ಪ್ರಯಾಣಿಕರ ಗಾಡಿಗಳಿಗೆ ವೇಳಾ ಪಟ್ಟಿಯಂತೆ ಓಡಾಟ ನಡೆಸಲು ಹಾಗೂ ಸಮಯ ಪರಿಪಾಲನೆ ಯನ್ನು ಕಾಪಾಡಲು ಈ ರೇಲು ಅಡ್ಡಿಯಾಗಿದೆ ಎಂದು ತಿಳಿದು ಬಂದಿದೆ. ರಾತ್ರಿ ಸಮಯದಲ್ಲಿ ಈ ಘಾಟ್ ಪ್ರದೇಶದಲ್ಲಿ ಅತ್ಯಧಿಕ ರೈಲು ಸಂಚಾರವು ಇರುತ್ತದೆ.



ರೇಲು ವಿಭಾಗಕ್ಕೆ ಗೂಡ್ಸ್‌ಗಳ ಓಡಾಟದಿಂದಲೇ ಅತ್ಯಧಿಕ ವರಮಾನ ಬರುತ್ತಿದೆ. ಆದುದರಿಂದ ಸುಗಮ ಸಂಚಾರಕ್ಕೆ ಅಡ್ಡಿಪಡಿಸಿ ಮುರುಡೇಶ್ವರ ಯಶವಂತಪುರ ರೈಲನ್ನು ಓಡಿಸಿದರೆ, ಬರುವ ಅತ್ಯಧಿಕ ವರಮಾನವು ನಿಂತು ಹೋಗುತ್ತದೆ. ಇದರಿಂದಾಗಿ, ಅತ್ಯಧಿಕ ಜನಸ್ಪಂದನೆ ಇದ್ದು ವರಮಾನವೂ ಹೆಚ್ಚಿರುವ, ಯಶವಂತಪುರ ಮುರುಡೇಶ್ವರ ರೈಲನ್ನು ಶಾಶ್ವತವಾಗಿ ರದ್ದು ಮಾಡಲು ನಿರ್ಣಯ ಕೈಗೊಳ್ಳಲಾಗಿದೆ ಎನ್ನಲಾಗಿದೆ.

4ನೇ ಪುಟದಲ್ಲಿ ಮುಂದುವರಿಯುವುದು

## ಸುರೇಶ್ ಪಳ್ಳಿ, ಭರತ್‌ರಾಜ್ ಸನಿಲ್‌ಗೆ 'ಬ್ರ್ಯಾಂಡ್ ಮಂಗಳೂರು ಪ್ರಶಸ್ತಿ'

ಮಂಗಳೂರು: ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸೌಹಾರ್ದತೆ ಪ್ರತಿಬಿಂಬಿಸುವ ವರದಿಗೆ ನೀಡಲಾಗುವ 'ಬ್ರ್ಯಾಂಡ್ ಮಂಗಳೂರು ಪ್ರಶಸ್ತಿ'ಗೆ ಪತ್ರಿಕಾ ಮಾಧ್ಯಮ ವಿಭಾಗದಲ್ಲಿ ಹೊಸದಿಗಂತ ವರದಿಗಾರ ಸುರೇಶ್ ಡಿ.ಪಳ್ಳಿ ಮತ್ತು ದೃಶ್ಯ ಮಾಧ್ಯಮ ವಿಭಾಗದಲ್ಲಿ ಏಷ್ಯಾನೆಟ್ ಸುವರ್ಣ ನ್ಯೂಸ್ ವರದಿಗಾರ ಭರತ್‌ರಾಜ್ ಕೆ. ಸನಿಲ್ ಆಯ್ಕೆಯಾಗಿದ್ದಾರೆ.


ಸುರೇಶ್ ಪಳ್ಳಿ



ಭರತ್‌ರಾಜ್ ಸನಿಲ್

ಹೊಸದಿಗಂತ ಪತ್ರಿಕೆಯಲ್ಲಿ 2022ರ ಜೂ.13 ರಂದು ಪ್ರಕಟಗೊಂಡ "ಮತ್ತೆ ಒಂದಾಗಲಿ ಒಡೆದ ಮನಸ್ಸುಗಳು" ಮತ್ತು ಸುವರ್ಣ ನ್ಯೂಸ್‌ನಲ್ಲಿ 2022ರ ಏ.19 ರಂದು ಪ್ರಸಾರಗೊಂಡ "ಹಿಂದೂ ಕುಶಲ ಕರ್ಮಿಯ ಕೈಚಳಕ, ಕೋಮು ಸೂಕ್ಷ್ಮ ಮಂಗಳೂರಿನ ಸೌಹಾರ್ದತೆಯ ಕಥೆ" ವಿಶೇಷ ವರದಿಗೆ ಪ್ರಶಸ್ತಿ ಲಭಿಸಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೀರ್ಪುಗಾರರಾಗಿ ಪತ್ರಿಕಾ ವಿಭಾಗದಲ್ಲಿ ಹಿರಿಯ ಪತ್ರಕರ್ತ ಹಿಲರಿ ಕ್ರಾಸ್ತ, ರಂಗ ಸಾಹಿತಿ, ನ್ಯಾಯವಾದಿ ಶಶಿರಾಜ್ ಕಾವೂರು, ಕರಾವಳಿ ಲೇಖಕಿ ಮತ್ತು ವಾಚಕಿಯರ ಸಂಘದ ಅಧ್ಯಕ್ಷೆ ಜ್ಯೋತಿ ಚೆಳ್ಯಾರು, ದೃಶ್ಯ ಮಾಧ್ಯಮ ವಿಭಾಗದಲ್ಲಿ ಉಜಿರೆ ಎಸ್‌ಡಿಎಂ ಪತ್ರಿಕೋದ್ಯಮ ಉಪನ್ಯಾಸಕ ಸುನಿಲ್ ಹೆಗ್ಡೆ, ನಮ್ಮ ಕುಡ್ಲ ವಾಹಿನಿಯ ಹಿರಿಯ ಪತ್ರಕರ್ತ ಲ್ಯಾನ್ಸಿ ಡಿಸೋಜ ಸಹಕರಿಸಿದ್ದರು.

## ಯಶವಂತಪುರ – ವಾಸ್ಕೋ ರೇಲು ಮಂಗಳೂರು ಸೆಂಟ್ರಲ್‌ಗೆ ವಿಸ್ತರಿಸಿ

3ನೇ ಪುಟದಿಂದ

ಭಾರತೀಯ ರೈಲ್ವೆಯ ಹಾಸನ ಮಂಗಳೂರು ರೈಲ್ವೆ ಅಭಿವೃದ್ಧಿ ನಿಗಮದೊಂದಿಗೆ ಮಾಡಿಕೊಟ್ಟ ಒಪ್ಪಂದದಂತೆ, ನೈರುತ್ಯ ರೈಲ್ವೆಯು ಒಂದು ದಿನಕ್ಕೆ ಕನಿಷ್ಟ ಇಂತಿಷ್ಟು **Goods** ಗಾಡಿಗಳ ಓಡಾಟ ಮಂಗಳೂರು–ಹಾಸನ ಮಾರ್ಗ ದಲ್ಲಿ ಓಡಿಸ ಬೇಕಾದ ಅನಿವಾರ್ಯತೆ ಇದೆ. **Goods** ಗಾಡಿಗಳು ರಾತ್ರಿ ಹೊತ್ತಲ್ಲಿ ಹೆಚ್ಚಾಗಿ ಹಾಸನ–ಮಂಗಳೂರು ಮಾರ್ಗದಲ್ಲಿ ಸಂಚಾರ ಮಾಡುವುದರಿಂದ ರಾತ್ರಿ ಹೊತ್ತಲ್ಲಿ ಹೆಚ್ಚುವರಿ ಪ್ರಯಾಣಿಕ ಗಾಡಿಗಳನ್ನು ಓಡಿಸಿದರೆ **goods** ಗಾಡಿಗಳ ಸಂಚಾರ ಕಡಿಮೆಯಾಗಿ ರೈಲ್ವೆಗೆ ಹಾಗೂ **HMRDC** ಗೆ ಬರುವ ಆದಾಯ ಕಡಿಮೆ ಆಗುವ ಸಾಧ್ಯತೆ ಇದೆ. ಇದಕ್ಕೆ **HMRDC** ಆಕ್ಷೇಪ ವ್ಯಕ್ತ ಪಡಿಸಬಹುದು. ಹೀಗಾಗಿ ಮುರುಡೇಶ್ವರ–ಯಶವಂತಪುರ ಗಾಡಿಯ ರದ್ದತಿಗೆ ಕಾರಣ ಆಗಿರಬಹುದು ಅಂತ ವಿಶ್ಲೇಷಿಸಲಾಗುತ್ತಿದೆ. ಒಂದು ವೇಳೆ ಇದು ನೈಜ ಪರಿಸ್ಥಿತಿ ಇದ್ದರೆ, ಇದೇ ರೈಲನ್ನು ಬೆಂಗಳೂರು ಹುಬ್ಬಳ್ಳಿ ಮಡಗಾವ್ ಉಡುಪಿ ತನಕ ಓಡಿಸಬಹುದು. ಹೇಗಾದರೂ ಇಂಜಿನ್ ಹಾಗೂ ರೇಕ್ ಈಗಾಗಲೇ ಇದೆ. ಈ ಬಗ್ಗೆಯೂ ಯೋಚನೆ ಮಾಡಬೇಕು ಎಂದು ಕರಾವಳಿ ಕರ್ನಾಟಕದ ಜನರು ಒತ್ತಾಯಿಸಿದ್ದಾರೆ.

ರೇಲುಗಾಡಿ ಸಂಖ್ಯೆ **17309/17310**, ಈ ರೇಲು ಬೆಳಿಗ್ಗೆ **5:00** ಘಂಟೆಗೆ ವಾಸ್ಕೊ ತಲುಪಿ, ಸುಮಾರು **18** ಗಂಟೆಗಳ ಕಾಲ ಅಲ್ಲೇ ನಿಲುಗಡೆಗೊಂಡು, ರಾತ್ರಿ **10:55** ಕ್ಕೆ ವಾಸ್ಕೊದಿಂದ ಮರು ಪ್ರಯಾಣ ಮಾಡುತ್ತಿದೆ

ಸಲಹೆ : **18** ಗಂಟೆಗಳ ಕಾಲ ವಾಸ್ಕೋದಲ್ಲಿ ನಿಲ್ಲಿಸುವ ಬದಲು, ಈ ರೈಲನ್ನು, ಪ್ಯಾಸೆಂಜರ್ ರೇಲಾಗಿ, ಮಂಗಳೂರು ಸೆಂಟ್ರಲ್ ತನಕ ವಿಸ್ತರಿಸಿ, ಪುನಹ ವಾಪಸ್ಸು ಕಾರವಾರ ಮೂಲಕ ವಾಸ್ಕೋಗೆ ಕಳುಹಿಸಿ ಯಶವಂತಪುರಕ್ಕೆ ಹೋಗಬಹುದಾಗಿದೆ

ಮುರುಡೇಶ್ವರ – ಯಶವಂತಪುರ ರೈಲು ರದ್ದಾ ದ ಬಳಿಕ ಹಾಲಿ ಸಂಚಾರ ನಡೆಸುವ ಯಶವಂತಪುರ –, ವಾಸ್ಕೋ ಎಕ್ಸ್‌ಪ್ರೆಸ್ ರೈಲನ್ನು, ಪ್ಯಾಸೆಂಜರ್ ರೇಲಾಗಿ, ವಾಸ್ಕೋ ದಿಂದ ಮಂಗಳೂರು ವರೆಗೆ ವಿಸ್ತರಣೆ ಮಾಡ ಬೇಕೆಂದು ಪ್ರಯಾಣಿಕರು ಆಗ್ರಹಿಸಿದ್ದು. ಇದರಿಂದ ಕಾರವಾರ, ಕುಂದಾಪುರ ಉಡುಪಿ ಭಾಗದ ಜನತೆಗೆ ಉಪಯೋಗ ಆಗುವುದು■

**ಒಲಿವರ್ ಡಿ'ಸೋಜಾ**
**ಕಾರ್ಯಕಾರಿ ಕಾರ್ಯದರ್ಶಿ**
**ರೇಲು ಯಾತ್ರಿ ಸಂಘ**
**ಮುಂಬೈ**


## ತುಂಬಿದ ಸಂಸಾರ ಬುಡ ಅಲುಗಾಡಬಾರದಷ್ಟೇ ರುದ್ರಾಕ್ಷಿ; ಉಂಡೆ ಹಲಸು

1ನೇ ಪುಟದಿಂದ



ಹಲಸಿನ ಹಣ್ಣು ಕೇವಲ ರುಚಿಯನ್ನು ಮಾತ್ರ ನೀಡದೆ ದೇಹಕ್ಕೆ ವಿಟಮಿನ್ ಎ ಮತ್ತು ಸಿ ಅನ್ನು ಕೊಡುವುದರೊಂದಿಗೆ ಪೊಟ್ಯಾಷಿಯಂ ಮ್ಯಾಗ್ನಿಷಿಯಂ ಕ್ಯಾಲ್ಸಿಯಂ ಸೇರಿದಂತೆ ಇದರಲ್ಲಿ ಅಡಕವಾಗಿದೆ ಈ ಹಣ್ಣಿಗೆ ಒಂದೊಂದು ಕಡೆ ಒಂದೊಂದು ಹೆಸರಿನಲ್ಲಿ ಕರೆಯಲಾಗುತ್ತದೆ ಕನ್ನಡದಲ್ಲಿ ಹಲಸು, ತುಳುವಿನಲ್ಲಿ ಗುಜ್ಜೆ, ಸಂಸ್ಕೃತದಲ್ಲಿ ಪನಸ್, ಇಂಗ್ಲಿಷ್‌ನಲ್ಲಿ ಜಾಕ್ ಫ್ರೂಟ್ ಹೀಗೆ ವಿವಿಧ ಹೆಸರಿನಲ್ಲಿ ಕರೆಯುತ್ತಾರೆ. ಹಲಸಿನ ಹಣ್ಣು ಅಪ್ಪಟ ಭಾರತೀಯ ಸಸ್ಯ ಹೋಮ ಹವನಕ್ಕೆ ಇದರ ಚಕ್ಕೆಗಳನ್ನು ಬಳಕೆ ಮಾಡುವುದು ಸಾಮಾನ್ಯ ಹಲಸಿನ ಎಲೆಯಿಂದ ಕೊಟ್ಟೆ ತಯಾರಿಸಿ ಕಡುಬು ಮಾಡುವುದು ಮಲೆನಾಡಿನ ಭಾಗದ ವಿಶೇಷ ಖಾದ್ಯಗಳಲ್ಲಿ ಒಂದು ಐಸ್ ಕ್ರೀಮ್ ಚಾಕಲೇಟ್ ಇಡ್ಲಿ, ಪೋಡಿ ಚಿಪ್ಸ್ ಹಪ್ಪಳ ಬೆರಟಿ ಇದು ತಿಂಡಿಗಳ ಪಟ್ಟಿಯಾದರೆ ಹಲಸಿನಹಣ್ಣಿನ ಬೀಜದಿಂದ ಲೂ ಕಾಫಿ ತಯಾರಿಸುವುದು ಇದೆ ಈ ಕಾಫಿಯು ಮಾಮೂಲಿ ಕಾಫಿ ಅಷ್ಟೇ ರುಚಿಕರವಾಗಿರುತ್ತದೆ ಹೀಗೆ ತಯಾರಿಸುವುದರಿಂದ ಇದಕ್ಕೆ ವಿಶೇಷವಾದ ಗೌರವ ಸ್ಥಾನಮಾನವಿದೆ.

ಹಲಸಿನ ಹಣ್ಣಿನ ಸೇವನೆಯಿಂದ ಅಲ್ಸರ್ ಮೂಳೆ ಸವೆತ ಜೀರ್ಣಕ್ರಿಯೆ ಖನಿಜಾಂಶ ಕೊರತೆಯನ್ನು ಸರಿದೂಗಿಸುತ್ತದೆ ಹಲಸಿನ ಬೆಳೆಯಲ್ಲಿ ಭಾರತವು ಜಗತ್ತಿನಲ್ಲಿ ದ್ವಿತೀಯ ಸ್ಥಾನ ಪಡೆದರೆ ಕರ್ನಾಟಕವು ಮೊದಲನೇ ಸ್ಥಾನ ಪಡೆದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೇರಳವಾಗಿ ಬೆಳೆಯುತ್ತದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಾರ್ಚ್‌ನಿಂದ ಸೆಪ್ಟಂಬರ್ ವರೆಗೆ ಫಲ ಬಿಡುತ್ತದೆ ನಮ್ಮ ಹಿರಿಯರು ಹಲಸಿನ ಹಣ್ಣಿನ ಬಗ್ಗೆ ಒಗಟುಗಳನ್ನು ಸಹ ಕಟ್ಟಿದ್ದಾರೆ ಅವು ಹೀಗಿವೆ ಅಡ್ಡ ಮರದಲ್ಲಿ ಬೊಡ್ಡಕುಳಿತಿದ್ದಾನೆ. ನನ್ನ ಅಜ್ಜಿ ಮೈ ಮೇಲೆ ಕಜ್ಜಿ ಹಣ್ಣು ಹಣ್ಣು ಮುದುಕಿ ಮೂಲೆಯಲ್ಲಿ ಕೂತು ಅಳುತ್ತಾಳೆ ಎಂಬ ಒಗಟು ಇನ್ನಷ್ಟು ಪುಷ್ಟಿದಾಯಕವಾಗಿದೆ. ಅತ್ಯಂತ ಬೆಲೆ ಬಾಳುವ ಮರಗಳಲ್ಲಿ ಒಂದಾಗಿದೆ ಇದರಿಂದ ಮನೆಗೆ ಬೇಕಾಗುವ ಪೀಠೋಪಕರಣಗಳನ್ನು ತಯಾರಿಸಿಕೊಳ್ಳಬಹುದು ಅಲ್ಲದೇ ಹಲಸಿನ ಕಾಯಿಯಿಂದ ಪಲ್ಯ , ಮಂಚೂರಿ ಹಣ್ಣಿನಿಂದ ಮುಳ್ಳುಕ್ಕ ಸುಟ್ಟಾವು ಗೆಣಸಲೆ, ಹಲ್ವ ಹಲಸಿನ ಹಣ್ಣಿನ ಮಾಡಬಹುದು. ಹೀಗೆ ಅಡುಗೆಯಲ್ಲೂ ಹಲಸಿಗೆ ಗೌರವದ ಸ್ಥಾನಮಾನವಿದೆ ಹಲಸಿನ ಹಣ್ಣಿನ ಘಮಘಮ ಪರಿಮಳ ಇನ್ನಷ್ಟೇ ಆಗಲಿದೆ■



**ಕುಮಾರ್ ಪೆರ್ನಾಜೆ ಪುತ್ತೂರು**

## ಯುದ್ಧ

ಅರಮನೆಯ ಅವಶೇಷದ
ಶಿಥಿಲ ಮೋಟು ಗೋಡೆ
ಬಿಕ್ಕಳಿಸುವ ಸದ್ದು
ಮಹಾರಾಣಿಯ ನಿಟ್ಟುಸಿರು !
ಸ್ವಯಂವರ ಗೆದ್ದು
ಮೆರವಣಿಗೆಯಲ್ಲಿ ಬಂದು
ಬರವಣಿಗೆಯಿಲ್ಲದೆ
ಎದೆಯಲ್ಲಿ ಸಹಿ ಒತ್ತಿದ!



ಭವ್ಯ ಅರಮನೆ
ತುಂಬು ಸಂಸಾರ
ಕೋಡಿ ಬಿದ್ದು ಹರಿಯುವ ಪ್ರೀತಿ
ಮೈ ತುಂಬಾ ವಜ್ರ ವೈಢೂರ್ಯ
ಬಳುಕುವ ಮೈ
ಭಾರವಾಗಿತ್ತು !
ಮಹಾರಾಜನ ಎದೆಗೊರಗಿ
ಸುಖದ ಜೋಕಾಲಿಯಾಡುವ
ಮುದ್ದು ದಿನಗಳು !

ದೂರದಲ್ಲೆಲ್ಲೋ ರಣ ಕಹಳೆ !
ಗಡಬಡಿಸಿ ಎದ್ದ ಇನಿಯ
ಗಲ್ಲಕ್ಕೆ ಮುತ್ತಿಟ್ಟು
ಖಡ್ಗ ಸವರಿ
ರಣ ವೀಳ್ಯ ಪಡೆದು
ಹೊರಟೇ ಬಿಟ್ಟ !
ಕಂಕಣ ಕಟ್ಟಲು
ಮರೆತಳು ಮಡದಿ !
ವಿರಹದ ದಿನಗಳು
ದೇವರ ಮನೆಯಲ್ಲಿ !

ಮಂಗಳ ವಾದ್ಯಗಳು !
ನಲ್ಲ ಮರಳುತ್ತಿದ್ದಾನೆ
ಗೆದ್ದ ಸಾಮ್ರಾಜ್ಯ
ಬೊಕ್ಕಸದೊಡನೆ !

ಸಖಿ ಸಿಂಗರಿಸಿದಳು
ಬಾಡಿದ ಮುಡಿಯ
ಮಂಗಳಾರತಿಯೊಡನೆ
ಮುಸುಕು ಸರಿಸಿ
ರಾಜನಿಗೆ ತಿಲಕವಿರಿಸಿ
ಹೊಸಲೊಳಗೆ ಬರಲು
ಸಮ್ಮತಿಸಿದಳು


ಇನಿಯನ ಜೊತೆ
ಇನ್ನೆರಡು ಪಾದಗಳು !
ರಾಜ ಗೆದ್ದು ತಂದ
ಹೆಣ್ಣು ಪಾದಕ್ಕೆರಗಿ
"ಅಕ್ಕಾ" ಎಂದಳು !!

ಹೊಸತು ಹಳತಾಗಿ
ಹಳತು ಕೊಳೆತು
ಅರಮನೆ ತುಂಬಾ
ರಾಣಿಯರು !!
ಮಹಾರಾಣಿಯ ಹೃದಯದರಸ
ಈಗ ಹಲವು ರಾಣಿಯರ ದಾಸ!
ಅರಮನೆಯ ಪಳಿಯುಳಿಕೆಗಳಲ್ಲಿ
ಮಹಾರಾಣಿ
ಬದುಕಿದ್ದಾಳೆ
ಶಾಂತಿ ಕ್ರಾಂತಿಯ
ಕಹಳೆಯೂದುತಾ ...



**ವೈಲೆಟ್ ಪಿಂಟೋ**
**ಅರಸೀಕೆರೆ**

## ದುಂಡು ಮಲ್ಲಿಗೆ ಅಲ್ಲ, ಜಾಜಿ ಮಲ್ಲಿಗೆ ಅಲ್ಲ ಕಾಡು ಮಲ್ಲಿಗೆ




ಗುರುವಾಯನ ಕೆರೆಯಿಂದ ಗುಂಡದಬಸ್ತಿಗೆ ನಡೆಯುವಾಗ ಮುಖ್ಯವಾಗಿ ಕಣ್ಸೆಳೆದದ್ದು ಕಾಡು ಮಲ್ಲಿಗೆ. ಇದನ್ನು ಸಸ್ಯ ಶಾಸ್ತ್ರೀಯವಾಗಿ ಜಾಸ್ಮೆನಿಯಂ ಆಂಗಸ್ತಿಫೋಲಿಯಂ ಎನ್ನುತ್ತಾರೆ.

ಮಲ್ಲಿಗೆಯಲ್ಲಿ **200**ಕ್ಕೂ ಹೆಚ್ಚು ಜಾತಿಗಳು ಇವೆ. ಮನೆ ಮತ್ತು ಊರ ಮಲ್ಲಿಗೆ ಜನಬಳಕೆಯದು. ಜೂನ್ ಮತ್ತು ಆಗಸ್ಟ್ ನಡುವೆ ಅರಳುವ ಕಾಡು ಮಲ್ಲಿಗೆ ತುಳುನಾಡಿನ ಕಾಡು ಗುಡ್ಡೆಗಳಲ್ಲಿ, ಮಲೆನಾಡಿನ ಮಲೆಗಳಲ್ಲಿ ಸಾಮಾನ್ಯ. ಆದರೆ ಬಹುತೇಕ ಕಡೆಗಣಿಸಲ್ಪಟ್ಟ ಹೂವು.

ಪಾಡಿ ಮಲ್ಲಿಗೆ, ಗುಡ್ಡೆ ಮಲ್ಲಿಗೆ ಎಂದು ತುಳುವಿನಲ್ಲಿ ಹೇಳುವ ಇದು ಕಾಡು ಮಲ್ಲಿಗೆ, ಬೆಟ್ಟ ಮಲ್ಲಿಗೆ ಎಂದೂ ಗುರುತು ಪಡೆದಿದೆ. ಇದು ಸಣ್ಣ ಹಬ್ಬುವ ಬಳ್ಳಿ ಪೊದೆ ಜಾತಿಯಯಾಗಿದೆ. ಒಂದೇ ಗಿಡದಲ್ಲಿ ವಿಭಿನ್ನ ಎಲೆ ಬಿಡುವ ಇದರ ಕವಲು ಗೆಲ್ಲುಗಳು ಎದುರುಬದುರಾಗಿ ಇರುತ್ತವೆ.

ದರ ನಕ್ಷತ್ರದಾಕಾರದ ಹೂಗಳು 7, 8 ಪಕಳೆಗಳನ್ನು ಸಾಮಾನ್ಯವಾಗಿ ಹೊಂದಿರುತ್ತವೆ ಹಾಗೂ ಸೊಗಸಾದ ಪರಿಮಳ ಬೀರುತ್ತವೆ■



**ಪೇಜಾ**

## 'ಆದಿಪುರುಷ್ ಸಿನಿಮಾ ಬ್ಯಾನ್ ಮಾಡಿ'; ಪ್ರಧಾನಿ ನರೇಂದ್ರ ಮೋದಿಗೆ ಪತ್ರ

'ಆದಿಪುರುಷ' ಸಿನಿಮಾ ಸುತ್ತಲೂ ಸಾಕಷ್ಟು ವಿವಾದಗಳು ಹುಟ್ಟಿಕೊಂಡಿವೆ. ಈ ಚಿತ್ರದಿಂದ ಹಿಂದೂಗಳ ಭಾವನೆಗೆ ಧಕ್ಕೆ ಉಂಟಾಗಿದೆ ಎಂದು ಅನೇಕರು ಆರೋಪಿಸಿದ್ದಾರೆ. ಚಿತ್ರದಲ್ಲಿ ಬಳಕೆ ಆದ ಸಂಭಾಷಣೆ, ಪಾತ್ರ ಹಾಗೂ ಕಥೆಯನ್ನು ತಿರುಚಿದ್ದು ವಿವಾದ ಏಳಲು ಪ್ರಮುಖ ಕಾರಣ. ಹೀಗಿರುವಾಗಲೇ ಸಿನಿಮಾಗೆ ಬ್ಯಾನ್ ಬಿಸಿ ತಟ್ಟುವ ಸೂಚನೆ ಎದುರಾಗಿದೆ. ಈ ಚಿತ್ರವನ್ನು ಥಿಯೇಟರ್ ಹಾಗೂ ಒಟಿಟಿಯಲ್ಲಿ ಬ್ಯಾನ್ ಮಾಡುವಂತೆ 'ಆಲ್ ಇಂಡಿಯಾ ಸಿನಿ ವರ್ಕರ್ಸ್ ಅಸೋಸಿಯೇಷನ್' ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದೆ.


**GUIDENCE** FOR

✔ Passport Online
✔ Adding Spouse Name
✔ PCC
✔ Visa Stamping
✔ Certificate Attestaion (Home Department & Embassy)
✔ Immigration

**PINGARA KANNADA NEWS PAPAER**
ಕ್ರೇಸ್ತಾಂವಾಚೆ ಏಕ್ ಮಾತ್ರ್ ಕನ್ನಡ ಪತ್ರ್



Raymond Dcunha
MA Journalism, BA LLB, D'thio
ಸಂಪಾದಕ್/Editor
Pingara Paper, Pingara.com

ESTD: 2004 ಪಿಂಗಾರ ಯಶಸ್ವಿ 18 ನೇ ವರ್ಷಕ್ಕೆ ಪಾದಾರ್ಪಣೆ

ಚಂದಾ ವಿವರ
1 Year : Rs. 250/-
5 Year : Rs.1,000/-
15 Years : Rs. 3,000/-
Lifetime Subscribers : Rs. 15,000/-

Cheque Drawn on: Pingara
A/c No.: 510101005980630
IFSC Code: corp0000133
Union Bank of India, Pandeshwar, Mangalore - 575001

Visit Our Website:
www.pingara.com

Pingara, Bishop's House, Church Building, 2nd Floor, Kodialbail Post, Mangalore - 575003
Email: pingaara@gmail.com Ph: 9845419482(M) (O) - 0824 2440822

# 54th Konkani Kavi Sangam - "Sobhakrit Aashaad" held in Kochi

Kochi: Konkani Kendr - Gosri - pur organised the 54th Konkani Kavi Sangam - "Sobhakrit Aashaad" on June 25, 2023 Sunday, at 3.30 pm at the residence of N. Sadananda Kamath (near North Gate of Cochin Tirumala Temple) Kochi.




After prayer, S. Chittaranjan Nayak welcomed all poets. Then the senior poet of Konkani R.S. Bhaskar delivered a message on the birth anniversary of Konkani Pitamah Shenoy Goembab (June 23). He said that the contribution of Goembab for the Konkani language will not be forgotten and his work will always light the way forward,

In the Kavi Goshti that followed, Sarva K. N. R. Bhat (Guru Mahima), N. Sadananda Kammath (Naa Nyaache Doni Bhaag), R. Ramanand Prabhu (Eksure Mana Vichaar), Sudheesh S. Shenoy (PoNosu), N. Balakrishna Mallya (Ritte.n Matthe.n), Pankaj Asher (Mathru Bhaasha), G. Mohan Rao (Phullaalo Prashnu), Vijayakumar N. Pai (Te.n Bareile.n), N. Madhav Rao (Yashoda Mai), Ranjit Kumar Bhat (Paarijatak), R.S Bhaskar (Bhiksha Nhay Jeevan), Goshripuram Harikumar (Vairagya) presented their poems.


After that, there was a discussion on the poems read. The meeting ended after the prayer.

# ವರ್ಲ್ಡ್ ಯುನಿವರ್ಸಿಟಿ ಗೇಮ್ಸ್ ಆಳ್ವಾಸ್‌ನ 8 ಕ್ರೀಡಾಪಟುಗಳು ಆಯ್ಕೆ

ವಿದ್ಯಾಗಿರಿ, ಮೂಡುಬಿದಿರೆ: ಚೀನಾದ ಚಾಂಗ್ಡುನಲ್ಲಿ ಜುಲೈ 28ರಿಂದ ಆಗಸ್ಟ್ 8ರ ವರೆಗೆ ನಡೆಯಲಿರುವ ವರ್ಲ್ಡ್ ಯುನಿವರ್ಸಿಟಿ ಗೇಮ್ಸ್ 2021(ವಿಶ್ವ ವಿಶ್ವವಿದ್ಯಾಲಯ ಕ್ರೀಡಾಕೂಟ–2021)ಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಕ್ರೀಡಾ ದತ್ತು ಯೋಜನೆಯ 8 ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ. ಇದರೊಂದಿಗೆ ಈ ವರೆಗೆ 21 ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ ಎಂ ಮೋಹನ ಆಳ್ವ ಪ್ರತಿಕಾಗೋಷ್ಠಿಯಲ್ಲಿ ತಿಳಿಸಿದರು.



Poonam Dinakar Sonune



Sinchana MS


Stalin Jose


Thirtesh Shetty


Basanti Kumari


Bhavani YadavBhagabati


Hardeep


Nirma Thakur


ಪುರುಷರ ವಿಭಾಗದಲ್ಲಿ ತೀರ್ಥೇಶ್ ಶೆಟ್ಟಿ (400 ಮೀಟರ್ಸ್ ಓಟ ಮತ್ತು 4*400 ಮೀಟರ್ಸ್ ರಿಲೇ), ಹರ್ದೀಪ್ (20 ಕಿ.ಮೀ ನಡಿಗೆ), ಸ್ಟಾಲಿನ್ ಜೋಸ್ ಎಸ್. (ಡೆಕಾಥ್ಲಾನ್), ಮಹಿಳಾ ವಿಭಾಗದಲ್ಲಿ ಪೂನಮ್ ದಿಂಕೆ ಸೋನುನೆ (5 ಸಾವಿರ ಮೀಟರ್ಸ್ ಮತ್ತು 10 ಸಾವಿರ ಮೀಟರ್ಸ್ ಓಟ), ಬಸಂತಿ ಕುಮಾರಿ (10 ಸಾವಿರ ಮೀಟರ್ಸ್ ಓಟ), ಠಾಕೂರ್ ನಿರ್ಮಾ (ಹಾಫ್ ಮ್ಯಾರಥಾನ್), ಸಿಂಚನಾ ಎಂ.ಎಸ್. (ಹೈಜಂಪ್), ಭವಾನಿ ಯಾದವ್ ಭಾಗಬತಿ (ಲಾಂಗ್ ಜಂಪ್ ಮತ್ತು 4*400 ಮೀಟರ್ಸ್ ರಿಲೇ) ಪಾಲ್ಗೊಳ್ಳಲಿದ್ದಾರೆ.

ಮಂಗಳೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದ ಈ ಕ್ರೀಡಾಪಟುಗಳು ಭುವನೇಶ್ವರದ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ನಡೆದಿದ್ದ ಆಯ್ಕೆ ಪ್ರಕ್ರಿಯೆಯಲ್ಲಿ (ಸಿಲೆಕ್ಷನ್ ಟ್ರಯಲ್ಸ್ ಗೇಮ್ಸ್) ಪ್ರವೇಶ ಪಡೆದಿದ್ದಾರೆ.

ಈ ಹಿಂದೆ ನಡೆದ ವರ್ಲ್ಡ್ ಯುನಿವರ್ಸಿಟಿ ಗೇಮ್ಸ್‌ಗಳಲ್ಲೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಕ್ರೀಡಾಪಟುಗಳು ಪ್ರತಿನಿಧಿಸಿದ್ದು, ಈ ವರ್ಷ ಸೇರಿದಂತೆ ಈ ವರೆಗೆ 21 ಮಂದಿ ಆಯ್ಕೆಯಾಗಿದ್ದಾರೆ.

2016ರಲ್ಲಿ ಕ್ರೊವೇಶಿಯಾ ನಡೆದ ಗೇಮ್ಸ್‌ನಲ್ಲಿ ಒಬ್ಬರು, 2017ರಲ್ಲಿ ತೈವಾನ್ ನಡೆದ ಗೇಮ್ಸ್‌ನಲ್ಲಿ ಇಬ್ಬರು, 2019ರಲ್ಲಿ ಇಟಲಿಯಲ್ಲಿ ನಡೆದ ಗೇಮ್ಸ್‌ನಲ್ಲಿ 10 ಜನ ಪಾಲ್ಗೊಂಡಿದ್ದರು.

# ಕ್ರಿಯೇಟಿವ್ ಕಾಲೇಜಿನ ಉಪನ್ಯಾಸಕ ಲೇಖಕ ಬಿ ರಾಘವೇಂದ್ರ ರಾವ್ ಅವರ 56ನೇ ಕೃತಿ "ಹಾವಿನ ಮನೆ" ಬಿಡುಗಡೆ




ಕಾರ್ಕಳ: ರಾಘವೇಂದ್ರ ರಾವ್ ಅವರು ಈಗಾಗಲೇ 55 ಕೃತಿಗಳನ್ನು ಪೂರೈಸಿದ್ದು, 56ನೇ ಕೃತಿ "ಹಾವಿನ ಮನೆ" ಪತ್ತೆದಾರಿ ಕಾದಂಬರಿ ಇತ್ತೀಚೆಗೆ ಬೆಂಗಳೂರಿನ ರಮಣಶ್ರೀ ಹೋಟೇಲಿನಲ್ಲಿ ವೀರಲೋಕ ಪ್ರಕಾಶನದ ವಾರ್ಷಿಕೋತ್ಸವದ ಸುಸಂದರ್ಭದಲ್ಲಿ ಲೋಕಾರ್ಪಣೆಗೊಂಡಿತು. ಈ ಕಾರ್ಯಕ್ರಮದಲ್ಲಿ ಶಿವಾಜಿ ಸುರತ್ಕಲ್ ಚಲನಚಿತ್ರ ಖ್ಯಾತಿಯ ನಿರ್ದೇಶಕರಾದ ಆಕಾಶ್ ಶ್ರೀವತ್ಸ ಅವರು ಬಿಡುಗಡೆಗೊಳಿಸಿದರು. ಕನ್ನಡ ಸಾಹಿತ್ಯಕ್ಕೆ ಪತ್ತೆದಾರಿ ಸಾಹಿತ್ಯದ ಅಗತ್ಯವಿದೆ. ಅದಕ್ಕೆ ಬಹುದೊಡ್ಡ ಓದುಗ ವರ್ಗವಿದೆ. ಈ ನಿಟ್ಟಿನಲ್ಲಿ ರಾಘವೇಂದ್ರ ರಾವ್ (ಅನು ಬೆಳ್ಳೆ) ಅವರ 'ಹಾವಿನ ಮನೆ' ಮಹತ್ವದ ಕೃತಿಯಾಗ ಬಲ್ಲದು ಎಂದು ಅಭಿಪ್ರಾಯಪಟ್ಟರು.

ಕೃತಿಕಾರ ರಾಘವೇಂದ್ರ ರಾವ್ ಅವರು ಪ್ರಸ್ತುತ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸು ತ್ತಿದ್ದಾರೆ.

ಕ್ರಿಯೇಟಿವ್ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಲೇಖಕ ಬಿ ರಾಘ ವೇಂದ್ರ ರಾವ್ ಅವರನ್ನು ಶ್ಲಾಘಿಸಿ ಅಭಿನಂದಿಸಿದ್ದಾರೆ.

# ಹೆಬ್ರಿ: ಮಿಶ್ರತಳಿ ಹೆಣ್ಣು ಕರುಗಳ ಸಾಕಾಣಿಕ ಯೋಜನೆ' ಮಾಹಿತಿ ಶಿಬಿರ

1ನೇ ಪುಟದಿಂದ

ಕರುಗಳನ್ನು ಉತ್ತಮ ರೀತಿಯಲ್ಲಿ ಸಾಕಿ, ನಿಗದಿತ ಅವಧಿಯೊಳಗೆ ಗರ್ಭ ಧರಿಸಿ (ಮಿಶ್ರತಳಿ 27 ತಿಂಗಳೊಳಗೆ ಹಾಗೂ ದೇಶಿ ತಳಿಗಳಾಗಿದ್ದಲ್ಲಿ ಗರಿಷ್ಠ 36 ತಿಂಗಳ ಒಳಗಾಗಿ), ರಾಸು ಕರು ಹಾಕಿದ್ದಲ್ಲಿ ಮತ್ತು ಫಲಾನುಭವಿಯು ಸಂಘಕ್ಕೆ ಹಾಲು ಪೂರೈಕೆ ಮಾಡಲು ಪ್ರಾರಂಭಿಸಿದ ನಂತರ ಒಕ್ಕೂಟದ ವತಿಯಿಂದ ರೂ.1000/– ವಿಶೇಷ ಪ್ರೋತ್ಸಾಹ ಧನವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಸಲಾಗುವುದು ಎಂದು ದ.ಕ. ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ನಿರ್ದೇಶಕರಾದ ಸಾಣೂರು ನರಸಿಂಹ ಕಾಮತ್ ತಿಳಿಸಿದರು.

ಅವರು ಜೂನ್ 19, ಸೋಮವಾರದಂದು ಹೆಬ್ರಿ ಹಾಲು ಉತ್ಪಾದಕರ ಸಹಕಾರಿಸಂಘದ ಆವರಣದಲ್ಲಿ" ಮಿಶ್ರತಳಿ ಹೆಣ್ಣು ಕರೆಗಳ ಸಾಕಾಣಿಕ ಯೋಜನೆ"ಯ ಮಾಹಿತಿ ಶಿಬಿರವನ್ನು ಉದ್ಘಾಟಿಸಿ, ಮಾತನಾಡುತ್ತಿದ್ದರು.

ಹೆಬ್ರಿ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾದ ಸಾಧು ಹೆಗಡೆಯವರು ಅಧ್ಯಕ್ಷತೆ ವಹಿಸಿದ್ದು, ಫಲಾನುಭವಿ ರೈತರಿಗೆ" ಕರುಸಾಕಾಣಿಕ ಕಾರ್ಡ್" ವಿತರಿಸಿದರು.

ಒಕ್ಕೂಟದ ಉಪ ವ್ಯವಸ್ಥಾಪಕರಾದ ಡಾ. ಧನಂಜಯ ಕರು ಸಾಕಾಣಿಕೆ ಬಗ್ಗೆ ಮಾಹಿತಿ ನೀಡಿ, ಯೋಜನೆಯಲ್ಲಿ ನೋಂದಾವಣೆ ಗೊಂಡ ಕರುಗಳಿಗೆ ಕಿವಿಗೆ ಸಾಂಕೇತಿಕವಾಗಿ ಕಿವಿಯೋಲೆ ಹಾಕಿದರು.

ವಿಸ್ತರಣಾಧಿಕಾರಿ ಮಂಜುನಾಥ್ ಪ್ರಾಸ್ತವಿಕ ಮಾತಾ ಗಳನ್ನಾಡಿದರು. ಸಂಘದ ಕಾರ್ಯದರ್ಶಿ ದಿವ್ಯಾನಂದ ನಾಯಕ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಸಂಘದ ನಿರ್ದೇಶಕರು, ಸದಸ್ಯರು, ಯೋಜನೆಯ ಫಲಾನುಭವಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಯೋಜನಾ ಸಿಬ್ಬಂದಿಗಳ ನೇಮಕಾತಿಗೆ ಅರ್ಜಿ ಆಹ್ವಾನ

ಮಂಗಳೂರು:– ಇಲ್ಲಿನ ಮೀನುಗಾರಿಕಾ ಕಾಲೇಜಿನಲ್ಲಿ ಅಸ್ತಿತ್ವದಲ್ಲಿರುವ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟಡ್‌ನ ಪ್ರಾಯೋಜಿತ ಯೋಜನೆಯಾದ 'ಮೀನುಗಾರಿಕೆಯಲ್ಲಿ ಕೌಶಲ್ಯಾ ಭಿವೃದ್ಧಿ ಕಾರ್ಯಕ್ರಮಗಳು' ಎಂಬ ಶೀರ್ಷಿಕೆಯಡಿಯಲ್ಲಿ ತಾತ್ಕಾಲಿಕ ಆಧಾರದ ಮೇಲೆ ಸಹ ತರಬೇತುದಾರ, ತರಬೇತಿ ಸಹಾಯಕ (ತಾಂತ್ರಿಕ) ಮತ್ತು ಕೇರ್‌ಟೇಕರ್ ಕಂ. ಹೆಲ್ಪರ್ ಸಿಬ್ಬಂದಿಗಳನ್ನು ನೇಮಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಅರ್ಜಿ, ವಿದ್ಯಾರ್ಹತೆ, ಅನುಭವ, ಸಂದರ್ಶನ ಇತ್ಯಾದಿಗಳ ಮಾಹಿತಿಗಾಗಿ ಕಾಲೇಜಿನ ವೆಬ್‌ಸೈಟ್ www.cofm.edu.in ಮೂಲಕ ಲಾಗ್‌ಇನ್ ಆಗಬಹುದು. ಹೆಚ್ಚಿನ ಮಾಹಿತಿಗೆ ಸಂಯೋಜಕರು ಕಂ. ಪ್ರಧಾನ ಸಂಶೋಧಕರ ಮೊಬೈಲ್ ಸಂಖ್ಯೆ: 9916924084, 8618660949ಗೆ ಸಂಪರ್ಕಿ ಸಬಹುದು ಎಂದು ಮೀನುಗಾರಿಕಾ ಕಾಲೇಜಿನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹತ್ತು ಕೋಟಿಯತ್ತ ದೇಶದ ಕ್ರೆಡಿಟ್ ಕಾರ್ಡ್‌ಗಳ ದಾಪುಗಾಲು

2023ರ ಏಪ್ರಿಲ್ ವೇಳೆ ಭಾರತದಲ್ಲಿ ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡ್‌ಗಳ ಸಂಖ್ಯೆ 8.65 ಕೋಟಿ. ಇದು 2022 ಏಪ್ರಿಲ್‌ನ 7.5 ಕೋಟಿಯಿಂದ ಭಾರೀ ಏರಿಕೆ ಕಂಡಿದೆ ಎಂದು ಎಸ್‌ಬಿಐ ಹೇಳಿದೆ.

2023ರಲ್ಲಿ ಕ್ರೆಡಿಟ್ ಕಾರ್ಡ್‌ಗಳ ಸಂಖ್ಯೆಯು ಡೆಬಿಟ್ ಕಾರ್ಡ್‌ಗಳನ್ನು ಹಿಂದಿಕ್ಕಿ ನಡೆದಿದೆ. 2024ರ ಏಪ್ರಿಲ್‌ಗೆ 10 ಕೋಟಿ ಎಂದು ನಿರೀಕ್ಷಿಸ ಲಾಗಿದೆ. ಸಿಟಿ ಬ್ಯಾಂಕ್ ವಿಲೀನವಾದ ಮೇಲೆ ದೇಶದಲ್ಲಿ ಅತಿ ಹೆಚ್ಚು ಕ್ರೆಡಿಟ್ ಕಾರ್ಡ್ ಬಳಕೆಯ ಬ್ಯಾಂಕ್ ಆಗಿದೆ ಆಕ್ಸಿಸ್ ಬ್ಯಾಂಕ್. ದೇಶದ 71% ಕ್ರೆಡಿಟ್ ಕಾರ್ಡ್‌ಗಳು ನಾಲ್ಕು ಬ್ಯಾಂಕು ಗಳಿಗೆ ಸೇರಿವೆ. ಅವು ಆಕ್ಸಿಸ್, ಎಚ್‌ಡಿಎಫ್‌ಸಿ, ಐಸಿಐಸಿಐ ಮತ್ತು ಎಸ್‌ಬಿಐ.




# ಮಲೈಕಾ ಆರೋರಾ ಗರ್ಭಿಣಿ ಗಾಸಿಪ್ –ನಟ ಅರ್ಜುನ್ ಕಪೂರ್ ಗರಂ

ಕಳೆದ ಕೆಲ ವರ್ಷಗಳಿಂದ ಅರ್ಜುನ್ ಹಾಗೂ ಮಲೈಕಾ ಪ್ರೀತಿಸುತ್ತಿದ್ದಾರೆ ಇವರಿಬ್ಬರ ನಡುವಿನ ರಿಲೇಷನ್‌ಶಿಪ್ ಬೇರೆ ಬೇರೆ ವಿಷಯಗಳು ಪದೇ ಪದೇ ಚರ್ಚೆಯಲ್ಲಿರುತ್ತದೆ. ಅದೇ ರೀತಿ ಕಳೆದ ನವೆಂಬರ್ ನಲ್ಲಿ ವೆಬ್ ಸೈಟ್ ವೊಂದು ಮಲೈಕಾ ಆರೋರಾ ಗರ್ಭಿಣಿ ಎನ್ನುವ ಸುದ್ದಿಯೊಂದನ್ನು ಬಿತ್ತರಿಸಿ ಮಲೈಕಾ ತಾಯಿ ಆಗಲಿದ್ದಾರೆ ಎನ್ನುವ ಸುದ್ದಿ ವೈರಲ್ ಆಗಿತ್ತು. ಈ ಸುದ್ದಿ ಸುಳ್ಳು ಸುದ್ದಿಯೆಂದು ಗೊತ್ತಾಗಿದ್ದು, ಇದಕ್ಕೆ ನಟ ಅರ್ಜುನ್ ಕಪೂರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ತುಲುವೆರೆ ಆರಾದನೆಡ್ ಪೊಸಪ್ಪೆ ಬೊಕ್ಕ ಗದ್ದಿಗೆದ ಬೊಂಬೆ

2ನೇ ಪುಟದಿಂದ

ಪೊಸಪ್ಪೆನ ಕೋಲ ಆವೊಡಾಂಡ ಅಲ್ಪ ಅಪ್ಪೆ ಮಮ್ಮಾಯಿನ ಗದ್ದಿಗೆ ಏರೊಡು . ಕೋಲ ಆಪಿನ ಮಾಗನೆಡ್ ಮಮ್ಮಾಯಿ ದೇವೊಲ್ಯ ಇತ್ತ್‌ದ್ ಅರೆನ



ಆರಾದನೆ ನಡಪುಂಡ ಅಲ್ಪ ಮಮ್ಮಾಯಿ ಗದ್ದಿಗೆ ಏರಾವುನ ಕ್ರಮ ಇಜ್ಜಿ. ಮಮ್ಮಾಯಿ ಪೊಸಪ್ಪೆನ ಪಲಿ ಅಂಚಾದ್ ಅರೆಗ್ ಸುರುತ ಮರ್ಯಾದಿ . ಮಮ್ಮಾಯಿ ಗದ್ದಿಗೆ ಏರಿ ಬೊಕ್ಕನೇ ಸತ್ಯದೇವತೆನ ಕೋಲ ನಡಪುಂಡು. ಮಾರ್ನೆಮಿಗ್ ನಮ ಬೊಂಬೆ ಕುಲ್ಲಾವುನ ತೂಪ ಆಂಡ ದೈವದ ಕಲಟ್ಲಾ ಇಂಚಿನ ಒಂಜಿ ಪೊರ್ಲುದ ಆಚರನೆ ಉಂಡು ಪಂದ್ ತೆರಿನಗ ಐತ ಬಗ್ಗೆ ತೆರಿಯೊನರೆ ಒಂಜಾತ್ ಪೊರ್ತು ಉಪೋದ್‌ಡ್ ಕುಲಿಯೆ. ಮಮ್ಮಾಯಿನ ಒರುನು ಇಡಿ ಬೊಂಡಡ್ ಮಲ್ಪುವೆರ್ . ಬೊಂಡದ ಅರ್ದ ಮೆಯ್ತಾ ಪಿದಾಯಿದ ಪಚ್ಚೆದ ದಪ್ಪ ಬಾಗೊನು ಸುರುಕು ದೆತ್ತುದು ಪೊರ್ಲುಡು ಪಿರೆಸೊಂದು ಪಿರೆಸೊಂದು ಸುರುಕು ಮೋನೆದ ಆಕಾರ ಕೊರ್ಪೆರ್. ಇಡೀ ಬೊಂಬೆ ಮಲ್ಪುನ ಕ್ರಮಟ್ ಮಸ್ತ್ ತಾಲ್ಮೆಡ್ , ಗಡಿಬಿಡಿ ಮಲ್ಪಂದೆ ತಪ್ಪಸ್‌ದಂಚ ಮಲ್ಪುನ ಪ್ರಕ್ರಿಯೆ ಉಂದು. ಒಂಜೇ ಒಂಜಿ ನಾರ್ ಲಕ್ಕಂದಿಲೆಕ್ಕ ಪೊರ್ಲುಡು ಸಪಾಯಿ ಮಲ್ಪುವೆರ್. ಬೊಕ್ಕ ಬೊಲ್ದು, ಕೆಂಪು, ಮಂಜಲ್ ರಂಗ್‌ನ್ ಕಲತ್‌ದ್ ಚರ್ಮದ ರಂಗ್ ಮಲ್ತುದು ಸಪಾಯಿ ಮಲ್ದಿನ ಬಾಗೊಗು ಪೊರ್ಲುಡು ಪೂಜುವೆರ್. ಬೊಕ್ಕ ಕಪ್ಪು ರಂಗ್‌ಡ್ ಕಣ್ಣ್, ಮೂಂಕು, ಬಾಯಿ, ಕುಜಲ್ ಮಲ್ತುದು ಅಪ್ಪೆ ರೂಪನ್ ಪಡಿಮೂಡವೆರ್. ಬೊಕ್ಕ



ಕಪ್ಪು, ಮಂಜಲ್, ಕೆಂಪು, ಬೊಲ್ದು ರಂಗ್‌ಡ್ ಅಪ್ಪೆನ ಮೋನೆಗ್ ಅಲಂಕಾರ ಮಲ್ತುದು ಪೊರ್ಲು ದಿಂಜಾವೆರ್. ಇಂಚ ತಯಾರ್ ಆಯಿನ ಮಮ್ಮಾಯಿನ ಒರುನು ಕೊಡಿಯ ಡಿಕ್ ಕನತ್‌ದ್ ಚೊಂಬುದ ಮಿತ್ತ್ ದೀದ್ ದುತ್ತೈತ ಪಾಡ್ದ್, ತರೆಕ್ ಪೂ ಪಿಂಗಾರಡ್ ಐತ ಮಲ್ಪುವೆರ್. ಇಂಚ ಆಯಿನ ಪೊರ್ಲುದ ಮಮ್ಮಾಯಿ ಬಿಂಬ ಕಟ್ಟ್ ಕಟ್ಲೆ ಪ್ರಕಾರ ಗದ್ದುಗೆ ಯೆರ್ದ್ ಬೊಕ್ಕ ಪೊಸಪ್ಪೆಗ್ ಕೋಲ ನಡಪುಂಡು.


ದೈವನರ್ತಕೆರ್ ನಲಿಪುವೆರ್ ಪನ್ಪಿನ ಕಾರನಗ್ ನಮ ಅಕಲೆನ್ ಕಲಾವಿದೆರ್ ಪಂಡ ತಪ್ಪಾವು ಅಕುಲು ಆರಾದಕೆರ್ ದೈವ ಕಟ್ಟುನಕಲೆಗ್ ಕಟಿನವಾಯಿನ ನೇಮ ಉಪ್ಪುಂಡು ಅಕುಲು ನಿಷ್ಟೆಡ್ ಉಪ್ಪೊಡಾಪುಂಡು. ಅಂಡಲಾ ಐತ ಹೊರತಾದ್ ಅಕುಲು ಕಲಾವಿದೆರೇ, ಉಂದು ದಾಯೆಗ್ ಪನ್ಪೆ ಪಂಡ ತೂಯ್ನ ಪೆಟ್ಟ್‌ಗೇ ಉಡಲ್ದ ಗಾಂತ್‌ಗ್ ಜಪ್ಪುನ ಮುಖವರ್ಣಿಕೆದ ( ಅರದಾಲ ) ಪೊರ್ಲು, ಬಲಿ, ಕದಿರ್ ಮುಡಿ, ಅನಿ , ಜೀಟಿಗೆ ಉಂದು ಪೂರ ಮಲ್ಪುನಲ್ಪ ಅಕಲ್ನ ಕೈಚಲಕ, ಪೊದಿಕೆ, ಕಾರ್ದ ಪಾಲೆ, ಕೇಪುಲ ಪೂತ ಸಿಂಗಾರ, ಸೀರೆ ನೆರಿ, ಬಲೊಲಿ, ಬೊಲ್ಲಿ ಬಂಗಾರ್ದ ಪೂ ಪಾಡುನು, ಪಿರವು ಸಿರಿ, ಉಂದೆನ್ ಪೂರ ಮಲ್ಪುನಲ್ಪ ಅಕಲ್ನ ಜಾನ್ಮೆ , ಈ ವಿಷಯಡ್ ಪೂರ ಅಕುಲು ಅಪ್ರತಿಮ ಕಲಾವಿದೆರ್. ಒಂಜಿ ಕೋಲ ಆವೊಡಾಂಡ ಪ್ರತಿ ದೈವಚಾಕಿರಿದಕಲೆಗ್ ಅಕಲ್ನನೇ ಆಯಿನ ಜಬದಾರಿ ಉಪ್ಪುಂಡು. ದೈವದ ಕಲಟ್ ಒಕ್ಕೊಂದು ಪೋಯಿನಾತ್ ತೆರಿಯೊನುನ ವಿಷಯ ಮಸ್ತ್ ಉಂಡು. ದೈವಗ್ ಕಟ್ಟುನಕುಲು ಒರ ಬತ್ತುದು ಕುಲಿಯೆರ್ಡ ಒಂಜಿ ಚಾ ತಿನರೆಲಾ ಮಲ್ಪರೆ ಆವಂದಿನಾತ್ ಒಡ್ಕದಾಂತೆ ಸೊಂದುವೆರ್ ಅಲ್ಪ . ಐತ ಒಟ್ಟುಗೆ ತೂವರೆ ತಿಕ್ಕುನ ಕುಡೊಂಜಿ ವಿಶೇಷ ಪಂಡಾ ಅಲ್ಪ ಅಪ್ಪೆ, ಅಮ್ಮೆ, ಅಣ್ಣೆ, ಮೆಗ್ಯ ಪೂರ ಸೇರ್ದ್ ಅಕುಲು ಏತೇ ಕಲ್ತುದು ಇತ್ತ್‌ಂಡಲಾ ತನ್ನ ಕುಲಕಸುಬುನು ಪೆರ್ಮೆಡ್ ಮಲ್ಪುನ ಪೊರ್ಲು. ತುಲುವ ಸಂಸ್ಕೃತಿ ಬಾರಿ ಮಲ್ಲ, ಅವ್ ಒವ್ವೆ ಅಚ್ಚರದ ಕಟ್ಟ್‌ದುಲಯಿ ತಿಕ್ಕಂದ್ ಆ ಕಾರನೊಗೆ ಏತೋ ವರ್ಸೊಡ್ದು ಬಾಯಿಡ್ದ್ ಬಾಯಿಗ್ ಪಗರ್ದ್ ಮೌಕಿಕವಾದ್ ಇತ್ತ್‌ದ್ಲಾ ಅಲಿಯಂದೆ ಒರಿದಿನಿ. ಇತ್ತೆದ ವಿದ್ವಾಂಸೆರ್ ಲಿಖಿತ ರೂಪೊಡು ಬರೆದ್ ನಮ್ಮ ಪರಪೋಕುನು ಪೊಸತಿರಿಗ್ ಒರಿಪುನ ಎಡ್ಡೆ ಕಜ್ಜ ಮಲ್ತೊಂದು



ಲ್ಲೆರ್ ಉಂದು ಕುಸಿತ ವಿಚಾರ. ನಮ್ಮ ಆಚರನೆಲೆಡ್ ಆಡಂಬರ ಬೊಡ್ಚಿ ಮೂಲ ವಿಚಾರೊಲೆನ್ ಪಿಂದೊಂ-ದು ನಮ್ಮ ಸಂಸ್ಕೃತಿನ್ ಒರಿಪುನ ಜಬದಾರಿ ಮಾತ ತುಲುವೆರೆನ ಮಿತ್ತುಂಡು

**ಗೀತಾ ಲಕ್ಷ್ಮೀಶ್**

## ಭಾರತದಲ್ಲಿ ನಿರ್ಮಾಣವಾಗಲಿದೆ ಮೊದಲ ನೀರಿನೊಳಗಿನ ರೈಲು ಮಾರ್ಗ



ಭಾರತದಲ್ಲಿ ಶೀಘ್ರದಲ್ಲೇ ನೀರಿ ನೊಳಗೆ ಸುರಂಗ ಮಾರ್ಗ ನಿರ್ಮಾಣವಾಗಲಿದೆ. ಇದು ಬ್ರಹ್ಮಪುತ್ರ ನದಿಯೊಳಗೆ ರೈಲು ಸಂಚಾರಕ್ಕಾಗಿ ನಿರ್ಮಾಣವಾಗುತ್ತಿರುವ ಸುರಂಗವಾಗಿದೆ. ಈ ಸುರಂಗದಲ್ಲಿ ರೈಲುಗಳು ಹಾಗೂ ಇತರ ಮೋಟಾರು ವಾಹನಗಳು ಕೂಡ ಚಲಿಸಬ ಹುದಾಗಿದೆ ಎನ್ನಲಾಗಿದೆ. ರೈಲ್ವೆ ಸುರಂಗ ನಿರ್ಮಾಣದ ನಂತರ ನೀರಿನೊಳಗೆ ಕೇವಲ 40 ನಿಮಿಷ ಗಳಲ್ಲಿ ಪ್ರಯಾಣ ಮಾಡಬಹು ದಾಗಿದೆ ಎನ್ನಲಾಗಿದೆ ಈ ಸುರಂಗವು ಸುಮಾರು 35 ಕಿಲೋ ಮೀಟರ್ ಉದ್ದವಿರುತ್ತದೆ ಎಂದು ತಿಳಿಸಲಾಗಿದೆ



ಧರ್ಮಸ್ಥಳ: ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್. ರಾಹುಲ್ ಭೇಟಿ ನೀಡಿ ಶ್ರೀ ಮಂಜುನಾಥ ಸ್ವಾಮಿ ದೇವರ ದರ್ಶನ ಪಡೆದು ನಂತರ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಜೊತೆ ಮಾತುಕತೆ ನಡೆಸಿದರು. ಶ್ರೀ ಹೆಗ್ಗಡೆಯವರು ಅವರನ್ನು ಸನ್ಮಾನಿಸಿದರು.

ಹೇಮಾವತಿ ವಿ. ಹೆಗ್ಗಡೆಯವರು, ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್ ಮತ್ತು ಶ್ರೇಯಸ್ ಕುಮಾರ್ ಉಪಸ್ಥಿತರಿದ್ದರು.

## ಲೂಡ್ಸ್ ಸೆಂಟ್ರಲ್ ಸ್ಕೂಲ್‌ನಲ್ಲಿ "ಎಲ್.ಸಿ.ಎಸ್ ಸಮ್ಮಿಟ್ 2023"




ಲೂಡ್ಸ್ ಸೆಂಟ್ರಲ್ ಸ್ಕೂಲ್‌ನ "ಸಮ್ಮಿಟ್ 2023 –"ರಕ್ಷಕ –ಶಿಕ್ಷಕ ವಿದ್ಯಾರ್ಥಿ ಸಮಾವೇಶ ನಡೆಯಿತು. ಮುಖ್ಯ ಅತಿಥಿಯಾಗಿ ಸಂತ ಅಲೋಶಿಯಸ್ ಕಾಲೇಜಿನ ಉಪಪ್ರಾಂಶು ಪಾಲ ಹಾಗೂ ಶಿಕ್ಷಣ ತಜ್ಞ ಡಾ। ಜೋನ್ ಎಡ್ವರ್ಡ್ ಡಿ'ಸಿಲ್ವ ಉಪಸ್ಥಿತರಿದ್ದರು.

ಶಾಲೆಯ ಸಂಚಾಲಕರಾದ ಡಾ. ವಂ. ಜೋನ್ ಬ್ಯಾಪ್ಟಿಸ್ ಸಲ್ಡಾನ ಮಾತಾನಾಡಿದರು. ಶಾಲಾ ಪ್ರಾಂಶುಪಾಲರಾದ ವಂ। ಫಾ। ರಾಬರ್ಟ್ ಡಿ'ಸೋಜ ಪ್ರಾಸ್ತವಿಕವಾಗಿ ಮಾತನಾಡುತ್ತಾ ವೇದಿಕೆಯಲ್ಲಿರುವ ಗಣ್ಯರನ್ನು ಹಾಗೂ ಸರ್ವರನ್ನು ಸ್ವಾಗತಿಸಿದರು.

ವೇದಿಕೆಯಲ್ಲಿ ಶಿಕ್ಷಕ–ರಕ್ಷಕ ಸಂಘದ ಉಪಾಧ್ಯಕ್ಷೆ ರೀತಿಕಾ ಪ್ರಾಂಶು, ಕಾರ್ಯದರ್ಶಿ ಮೇರಿ ಮೊನಿಶಾ, ಬಿಜೈ ಪ್ಯಾರಿಸ್ ಪರಿಷತ್ತಿನ ಉಪಾಧ್ಯಕ್ಷ ಅಶೋಕ್ ಪಿಂಟೋ, ಕಾರ್ಯದರ್ಶಿ ಸಿಂತಿಯ ಅವಿತಾ ಪಿಂಟೋ, ನಾಯಕ ಅರ್ಜುನ್ ಕುಮಾರ್, ನಾಯಕಿ ಪ್ರಜ್ಞಾ ಕೆ.ಪಿ. ಉಪಸ್ಥಿತರಿದ್ದರು. ಸಿ.ಬಿ.ಎಸ್.ಇಯ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯೊಂದಿಗೆ ಪಾಸಾದ ಹತ್ತನೇ ಮತ್ತು ಹನ್ನೆರಡನೇ ತರಗತಿಯ ವಿದ್ಯಾರ್ಥಿಗಳನ್ನು ಅವರ ಪೋಷಕರೊಂದಿಗೆ ಸನ್ಮಾನಿಸಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮದ ಭಾಗವಾಗಿ ಮಕ್ಕಳಿಗೆ ಪ್ರೇರಣೆ ನೀಡುವ ಸಾಂದರ್ಭಿಕ ಕಿರು ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಿ ಪ್ರದರ್ಶಿಸಿದರು. ಶಿಕ್ಷಕಿ ದೀಪಾ ಡಿಸೋಜ ಕಾರ್ಯಕ್ರಮ ನಿರ್ವಹಿಸಿ, ಉಪಪ್ರಾಂಶುಪಾಲೆ ಅನಿತಾ ಥೋಮಸ್ ಕಾರ್ಯಕ್ರಮವನ್ನು ಸಂಯೋಜಿಸಿದರು, ಗ್ರೆಟ್ಟಾ ಮಿನೇಜಸ್, ಶೈಲಾ ಪಿರೇರ ಮತ್ತು ಅನಿತಾ ಮಿನೇಜಸ್ ವಿಶಿಷ್ಟ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪರಿಚಯಿಸಿದರು. ರೋಶನಿ ಜೋಸ್, ಜಯಶ್ರೀ, ಐವನ್ ಮಸ್ಕರೇನ್ಹಸ್, ವಿದ್ಯಾ, ಮೇರಿ ಡಿಸೋಜ ಮತ್ತು ಹೆನ್ರಿ ಮಸ್ಕರೇನ್ಹಸ್‌ರವರು ಸಹಕರಿಸಿದ್ದರು. ಉಪಪ್ರಾಂಶುಪಾಲೆ ಬೆಲಿಟಾ ಮಸ್ಕರೇನ್ಹಸ್ ವಂದಿಸಿದರು.

## ಭಾರತದ ಅತಿ ಚಿಕ್ಕ ಪ್ರಾಯದ ವಾಣಿಜ್ಯ ಪೈಲಟ್ ಆಗಿ ಸಾಕ್ಷಿ ದಾಖಲೆ



ಚಂಡಿಗಡದ ವ್ಯಾಪಾರಿ ಕುಟುಂಬದ ಸಾಕ್ಷಿ ಕೋಚ್ಚಾರ್ ಅವರು ತನ್ನ 18 ವರುಷ ತುಂಬಿದ ದಿನವೇ ವಾಣಿಜ್ಯ ಪೈಲಟ್ ಲೈಸೆನ್ಸ್ ಪಡೆದು ದಾಖಲೆ ಬರೆದಿದ್ದಾರೆ. 19ರ ಪ್ರಾಯದಲ್ಲಿ ಪೈಲಟ್ ಆಗಿದ್ದ ಮೈತ್ರಿ ಪಟೇಲ್ ದಾಖಲೆ ಪತನವಾಯಿತು.

ಶಾಲಾ ದಿನಗಳಲ್ಲಿಯೇ ಪೈಲಟ್ ಆಗಲು ಆಶಿಸಿದ ಸಾಕ್ಷಿ 17ರಲ್ಲಿ ಅಮೆರಿಕಕ್ಕೆ ಹೋಗಿ ಅಲ್ಲಿನ ಏವಿಯೇಶನ್ ಕ್ಲಬ್‌ನಲ್ಲಿ ತರಬೇತಿ ಪಡೆದರು. ದೇಶಕ್ಕೆ ಹಿಂತಿರುಗಿ ಮುಂಬಯಿಯ ಸ್ಕೈಲೈನ್ ಏವಿಯೇಶನ್ ಕ್ಲಬ್ ಸೇರಿದರು. ಪೂರ್ಣ ಪ್ರಮಾಣದ ವಾಣಿಜ್ಯ ಪೈಲಟ್ ಪರವಾನಗಿ ಪ್ರಮಾಣ ಪತ್ರವನ್ನು ಪಡೆದರು.

ಪ್ರಯತ್ನಿಸುವಾಗ ಮತ್ತು ಅದಕ್ಕೆ ಅವಕಾಶ ನೀಡಿದಾಗ ನೀವು ಏನನ್ನೂ ಕಳೆದುಕೊಳ್ಳುವುದಿಲ್ಲ.
ಅದು ನಿಮಗೆ ಯಾವುದೇ ಒಳಿತನ್ನು ಮಾಡದೇ ಇದ್ದರೆ ಅದರಿಂದ ಕಲಿತುಕೊಳ್ಳಿರಿ.

Licensed to Post without repayment Licence No.SKWPP/MNG/183/2022-24 Regd. No. MNG/954/2022-2024
Edited, Published & Owned by Raymond D'Cunha, Published at No. 10-156, Suvarna road End, Kankanady 'B Village', Kankanady Post, Mangalore - 575002, DK
Printed by Him at Pingara Printers, No. No. 10-156, Suvarna Road End, Kankanady 'B Village', Kankanady Post, Mangalore - 575002, DK